ದೆಹಲಿ ಕರ್ನಾಟಕ ಸಂಘದ

# ಅಭಿಮತ

ಸೆಪ್ಟೆಂಬರ್ 2019
ಬೆಲೆ ರೂ. 1



## ಯೋಗ ದರ್ಶನ



ಕರ್ನಾಟಕ ವಿಧಾನಸಭೆಯ ನೂತನ ಸಭಾಪತಿ ಸನ್ಮಾನ್ಯ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು ದಿನಾಂಕ 29.08.2019ರಂದು ದೆಹಲಿಯ ಕರ್ನಾಟಕ ಭವನದಲ್ಲಿ ಭೇಟಿ ಮಾಡಿ ಅಭಿನಂದಿಸಿದರು. ಅವರು ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳ ಬಗ್ಗೆ ತಿಳಿಸಿ ಸಂಘಕ್ಕೆ ಬರುವಂತೆ ಆಮಂತ್ರಿಸಿದರು. ಸಂಘದ ಜಂಟೀ ಕಾರ್ಯದರ್ಶಿ (ಆಡಳಿತ) ಶ್ರೀ ರಾಧಾಕೃಷ್ಣ ಅವರು ಇದ್ದರು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೂತನ ಸಚಿವರಾದ ಸನ್ಮಾನ್ಯ ಶ್ರೀ ಸಿ.ಟಿ. ರವಿ ಅವರನ್ನು ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ದಿನಾಂಕ 05.09.2019ರಂದು ಭೇಟಿ ಮಾಡಿ ಅಭಿನಂದಿಸಿದರು. ಅವರು ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳ ಬಗ್ಗೆ ತಿಳಿಸಿ ಸಂಘಕ್ಕೆ ಬರುವಂತೆ ಆಮಂತ್ರಿಸಿದರು. ಜೊತೆಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಸಂತೋಷ್ ಜೆ. ಅವರು ಇದ್ದರು.

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳಿ ಸದಸ್ಯರು
ಸಂತೋಷ್ ಕುಮಾರ್ ಉಪಾಧ್ಯಾಯ
ಎಸ್. ಕುಮಾರ್
ಚಂದ್ರಶೇಖರ ಜೋಳದರಾಶಿ

ಸಂಪುಟ 29
ಸಂಚಿಕೆ 12
ಸೆಪ್ಟೆಂಬರ್ 2019

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

# ಸಂಪಾದಕೀಯ

## ಚುಟುಕು ಸಾಹಿತ್ಯ ಅಧ್ಯಯನ ಯೋಗ್ಯ

ಸಾಮಾಜಿಕ ಸಮಸ್ಯೆಗಳು, ಸರ್ಕಾರದ ಧೋರಣೆಗಳು, ಮಾನವ ಸಂಬಂಧಗಳು ಹೀಗೆ ವಿವಿಧ ವಿಷಯಗಳ ಕುರಿತು ಹಾಸ್ಯ, ವಿಡಂಭನೆ ಮತ್ತು ಗಂಭೀರವಾಗಿ ನಾಲ್ಕೇ ನಾಲ್ಕು ಸಾಲುಗಳಲ್ಲಿ ಹೇಳುವ ಚುಟುಕು ಕವಿತೆಗಳು ವಿಶಿಷ್ಟವಾದ ಕಾವ್ಯ ಪ್ರಕಾರ. ಇದೇ ಮೊದಲ ಬಾರಿಗೆ ದೆಹಲಿ ಕರ್ನಾಟಕ ಸಂಘದಲ್ಲಿ 'ಚುಟುಕು ಕಾವ್ಯ ಸಂಜೆ' ಯನ್ನು ಆಯೋಜಿಸಲಾಗಿದೆ.

ದಕ್ಷಿಣ ಕನ್ನಡ ಚುಟುಕು ಸಾಹಿತ್ಯ ಪರಿಷತ್ತು ಮತ್ತು ದೆಹಲಿ ಕರ್ನಾಟಕ ಸಂಘದ ಸಂಯುಕ್ತ ಆಶ್ರಯದಲ್ಲಿ ಮುಂದಿನ ತಿಂಗಳು ನಡೆಯುವ ಕಾರ್ಯಕ್ರಮದಲ್ಲಿ ಪರಿಷತ್ತಿನ ಅಧ್ಯಕ್ಷ ತಾರಾನಾಥ ಬೋಳಾರ್ ಸೇರಿದಂತೆ ಕರಾವಳಿಯ ಹಲವಾರು ಚುಟುಕು ಕವಿಗಳು ಭಾಗವಹಿಸಲಿದ್ದಾರೆ. ಇದರೊಂದಿಗೆ ವೈವಿಧ್ಯಮಯ ಕಾರ್ಯಕ್ರಮಗಳು ಇದ್ದು ವಿನೂತನ ಬಗೆಯ ಕಾರ್ಯಕ್ರಮ ಇಲ್ಲಿ ಅನಾವರಣಗೊಳ್ಳಲಿದೆ.

'ಹನಿಗವನ' ಎಂದು ಕರೆಸಿಕೊಂಡಿರುವ ಚುಟುಕು ಕವಿತೆಗಳನ್ನು ಜನಪ್ರಿಯಗೊಳಿಸಿದವರು ನಾಡಿನ ಹಿರಿಯ ಕವಿ ಮತ್ತು ರಾಜಕಾರಣಿ ದಿನಕರ ದೇಸಾಯಿ. ರಾಜಕೀಯ ವಿಡಂಬನೆಗಳಿಗೆ ಅವರ ಕವಿತೆಗಳು ಹೆಸರಾಗಿವೆ. ದಿನಕರ ದೇಸಾಯಿ ಅವರು 'ಚುಟುಕು ಬ್ರಹ್ಮ' ಎಂದೇ ಕರೆಸಿಕೊಂಡಿದ್ದಾರೆ. ಅಕಬರ ಅಲಿ, ಸಿ.ಪಿ.ಕೆ., ಬಿ.ಆರ್. ಲಕ್ಷ್ಮಣ ರಾವ್, ಡುಂಡಿರಾಜ್ ಮೊದಲಾದವರು ಚುಟುಕು ಸಾಹಿತ್ಯವನ್ನು ಬೆಳೆಸಿದ ಕನ್ನಡದ ಪ್ರಮುಖ ಸಾಹಿತಿಗಳು.

ತಮ್ಮ 'ಹನಿಗಾರಿಕೆ'ಯ ಮೂಲಕ 'ಹನಿ ಖಜಾನೆ'ಯ ಒಡೆಯರಾದ ಡುಂಡಿರಾಜ್ ಅವರ ಕವಿತೆಗಳು ಹಾಸ್ಯಪ್ರಧಾನವಾಗಿದೆ.

ಚುನಾವಣೆಗೆ ನಿಂತಾಗ
ಎಲ್ಲ ಅಭ್ಯರ್ಥಿಗಳಿಗೂ ಇರುತ್ತದೆ
ನಿರ್ದಿಷ್ಟ ಚಿಹ್ನೆ, ಗುರುತು
ಗೆದ್ದ ನಂತರ ಇರುವುದಿಲ್ಲ
ಗೆಲ್ಲಿಸಿದವರ ಗುರುತು

ಹೀಗೆ ನಾಲ್ಕು ಸಾಲುಗಳಲ್ಲಿ ಬರೆಯುವ ಡುಂಡಿರಾಜರ ಈ ಸಾಲುಗಳು ಸಮಕಾಲೀನ ರಾಜಕೀಯ ಸಂದರ್ಭಕ್ಕೆ ಕನ್ನಡಿ ಹಿಡಿಯುತ್ತದೆ. ಹನಿಗವನಗಳು ಈಚೆಗೆ ನಡೆಯುವ ಹಾಸ್ಯ ಸಂಜೆಗಳ ಭಾಗವೂ ಆಗಿದೆ. ಅಲ್ಲಿ ಈ ಹನಿಗವನಗಳು ಮನರಂಜನೆಯೊಂದಿಗೆ ಚಿಂತನೆಗೂ ಅವಕಾಶ ಕಲ್ಪಿಸುತ್ತದೆ.

ಸಾಹಿತ್ಯಾಭಿರುಚಿ ಬೆಳೆಸುವಲ್ಲಿ ಚುಟುಕು ಕವಿತೆಗಳ ಪಾತ್ರ ದೊಡ್ಡದು. ಚುಟುಕು ಕವಿತೆಗಳಿಗೆ ಹನ್ನೆರಡನೇ ಶತಮಾನದ ಶರಣರ ವಚನಗಳೇ ಸ್ಫೂರ್ತಿ ಎಂದು ಹಲವರು ಅಭಿಪ್ರಾಯಪಟ್ಟಿದ್ದಾರೆ. ಈ ಕುರಿತು ಹೆಚ್ಚಿನ ಸಂಶೋಧನೆಗಳು ನಡೆದಿಲ್ಲ. ಈ ವಿಷಯದ ಕುರಿತು ಅಧ್ಯಯನ ಆಗಬೇಕು. ಈಚೆಗೆ ಹಿರಿಯ ಸಾಹಿತಿ ಡಾ. ಅರವಿಂದ ಮಾಲಗತ್ತಿಯವರು 'ಚುಟುಕು ಮಾ ಕಾವ್ಯ ಚಿಂತನ' ಎಂಬ ಕೃತಿಯನ್ನು ಬರೆದಿದ್ದಾರೆ. ಚುಟುಕು ಸಾಹಿತ್ಯಕ್ಕೆ ಇನ್ನಷ್ಟು ಪ್ರೋತ್ಸಾಹ ಅಗತ್ಯ.

*ಡಾ. ಅವನೀಂದ್ರನಾಥ್ ರಾವ್*

**ಮುಖಪುಟ ಚಿತ್ರ**

ಕಿರಿಯ ವಯಸ್ಸಿನಲ್ಲಿಯೇ ಯೋಗಪಟುವಾಗಿ ಅಪಾರ ಸಾಧನೆ ಮಾಡಿದ ಬಾಲಕ ಪ್ರಿಯದರ್ಶನ್ ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ : 18.08.2019ರಂದು ವಿವಿಧ ಬಗೆಯ ಯೋಗಾಸನಗಳನ್ನು ಪ್ರದರ್ಶಿಸಿದರು. ಅದರ ಒಂದು ವಿಶೇಷ ಭಂಗಿ ಈ ಬಾರಿ ಮುಖಪುಟದಲ್ಲಿದೆ.

*ಸಂಪಾದಕ*

ಅಭಿಮತ
ಸಂಪುಟ 29 ಸಂಚಿಕೆ 12
ಸೆಪ್ಟೆಂಬರ್ 2019, ಬೆಲೆ ರೂ. 1

## ನಮ್ಮನಮ್ಮೊಳಗೆ

# ಮಳೆಗಾಲದ ಆವಾಂತರಗಳು

ಇತ್ತೀಚೆಗೆ ಕರ್ನಾಟಕದ ಹಲವು ಭಾಗಗಳಲ್ಲಿ ಅಪ್ಪಳಿಸಿದ ಮಳೆಯ ಅಬ್ಬರ ಲಕ್ಷಾಂತರ ಜನರನ್ನು ತಮ್ಮ ಮನೆ ಮಠ ಆಸ್ತಿಪಾಸ್ತಿಗಳನ್ನು ಕಳೆದುಕೊಳ್ಳುವಂತೆ ಮಾಡಿದೆ. ಯಾರೂ ಕಾಣದ ಮತ್ತೆ ಮತ್ತೆ ಮರುಕಳಿಸುವ ಮಳೆಯ ಮಹಾಪೂರಕ್ಕೆ ಕಾರಣಗಳನ್ನು ಹುಡಕಬೇಕಿದೆ. ಕಳೆದ ವರ್ಷ ಕೊಡಗಿನಲ್ಲಿ ಮತ್ತು ಕೇರಳದ ಹಲವು ಭಾಗಗಳಲ್ಲಿ ಇದೇ ಬಗೆಯ ಮಳೆಯ ಮಾರುತ ಆಸ್ತಿಪಾಸ್ತಿಗಳ ಜೊತೆ ನೂರಾರು ಜನರ ಬದುಕನ್ನೇ ಬಲಿ ತೆಗೆದುಕೊಂಡದ್ದನ್ನು ನಾವು ಇಲ್ಲಿ ನೆನಪಿಸಿಕೊಳ್ಳಬೇಕು. ನಾಲ್ಕಾರು ವರ್ಷಗಳ ಹಿಂದೆ ಹಿಮಾಲಯದ ರಾಜ್ಯವಾದ ಉತ್ತರಾಖಂಡದಲ್ಲಿ ಈ ಮಳೆಯ ಪ್ರಕೋಪ ತಂದ ನೀರಿನ ಪ್ರಳಯ ಅಲ್ಲಿನ ಬದುಕನ್ನೇ ಪೂರಾ ಹದಗೆಡಿಸಿಬಿಟ್ಟಿದೆ. ಅಲ್ಲಿನ ಜನ ಇನ್ನೂ ತಮ್ಮ ಸಾಮಾನ್ಯ ಬದುಕಿನ ಕೊಂಡಿಗಳನ್ನು ಬೆಸೆದುಕೊಳ್ಳುವುದರಲ್ಲೇ ನಿರತರಾಗಿದ್ದಾರೆ. ದೇಶದ ಬೃಹನ್ನಗರವಾದ ಮುಂಬೈನಲ್ಲಿ ಪ್ರತಿ ಮಳೆಗಾಲದಲ್ಲೂ ರಸ್ತೆಗಳೇ ತುಂಬಿ ಹರಿಯುವ ನದಿಗಳಾಗುವ ವಿಚಿತ್ರವನ್ನು ನಾವು ಕಾಣುತ್ತಿದ್ದೇವೆ. ಮತ್ತೆ ನಾಲ್ಕಾರು ವರ್ಷಗಳ ಹಿಂದೆಯೆ ಇದೇ ಬಗೆಯ ಮಳೆಯ ಮಾರುತ ಚೆನ್ನೈ ಶಹರವನ್ನೇ ಅಲ್ಲಾಡಿಸಿದ್ದನ್ನು ನಾವು ಕಂಡಿದ್ದೇವೆ. ನೀರಿನಿಂದ ತುಂಬಿ ತುಳುಕುತ್ತಿದ್ದ ಇದೇ ಚೆನ್ನೈ ಶಹರ ಮೊನ್ನೆಯಷ್ಟೇ ನೀರಿನ ಬಿಂದುಗಳಿಗಾಗಿ ಹಪಹಪಿಸಿದ್ದನ್ನು ನಾವು ಕಂಡಿದ್ದೇವೆ. ಈ ಬಗೆಯ ಪಾಕೃತಿಕ ವೈರುಧ್ಯತೆಗಳು ಬರೀ ಕರ್ನಾಟಕ ಹಾಗೂ ನಮ್ಮ ದೇಶದ ವಿವಿಧ ಭಾಗಗಳಿಗೆ ಮಾತ್ರ ಸೀಮಿತವಾಗಿಲ್ಲವೆಂಬುದನ್ನು ನಾವು ಗಮನಿಸಬೇಕು. ದಕ್ಷಿಣ ಆಫ್ರಿಕಾದ ಜೊಹಾನ್ಸಬರ್ಗ್‌ನಿಂದ ಅಮೇರಿಕೆಯ ಪ್ಲಾರಿಡಾದ ತನಕ ನೀರಿನ ಬವಣೆಯ, ಬಾರಿಬಾರಿ ಬರತೊಡಗಿರುವ ಚಂಡಮಾರುತಗಳ ಈ ಪ್ರಕೃತಿಯ ವಿಚಿತ್ರ ನರ್ತನ ನಮಗೆಲ್ಲ ಬೇರಾವುದೊ ಅರಿಯದ ಮಹತ್ತರ ಬದಲಾವಣೆಯ ಸೂಚಿಗಳಾಗಿ ಕಾಣಿಸುತ್ತಿವೆ.

ಈ ಭೂಮಂಡಲದ ಉಗಮದ ಚರಿತ್ರೆಯಲ್ಲಿ ಏನೆಲ್ಲ ಆಗಿವೆಯೆಂಬುದನ್ನು ಅರಿಯುವುದು ಸುಲಭವಲ್ಲ. ಅದರ ಉದರದಿಂದ ನಭೊಮಂಡಲದವರೆಗೆ ಹಬ್ಬಿರುವ ಸಾಮನ್ಯ ಹವಾಮಾನದ ಮಟ್ಟದಲ್ಲಿ ಏನೊ ಅಲ್ಪಸ್ವಲ್ಪ ವ್ಯತ್ಯಯವಾಗುತ್ತಿದೆಯೆಂಬುದು ವಿಜ್ಞಾನಿಗಳ ಅಂಬೋಣ. ಈ ಬದಲಾವಣೆ ಸಹಜವಾದದ್ದಲ್ಲ. ಇದರಲ್ಲಿ ಮಾನವ ನಿರ್ಮಿತವಾದ ಹಲವಾರು ಚಟುವಟಿಕೆಗಳು ಕಾರಣವಾಗಿಯೆಂಬುದನ್ನು ಈ ವೈಜ್ಞಾನಿಕರು ಹೇಳುತ್ತಿದ್ದಾರೆ. ಇದಕ್ಕೆ ಮುಖ್ಯವಾಗಿ ನಮ್ಮ ಬೇಕುಬೇಡಗಳೇ ಹಲವಾರು ರೀತಿಗಳಲ್ಲಿ ಕಾರಣವಾಗಿಯೆಂಬುದನ್ನು ಅವರು ಹೇಳುತ್ತಿದ್ದಾರೆ. ನಮ್ಮ ಬದುಕಿನ ದೃಷ್ಟಿಯನ್ನು, ಬದುಕುವ ಪರಿಯನ್ನೇ ಬದಲಾಯಿಸಿಕೊಳ್ಳದಿದ್ದರೆ ನಮ್ಮ ಭೂಮಿಯೆಂಬುದು ಮುಂದಿನ ಐವತ್ತು ವರ್ಷಗಳಲ್ಲಿ ಒಂದೆರಡು ಡಿಗ್ರಿಗಳಷ್ಟು ತಾಪಮಾನವನ್ನು ಹೆಚ್ಚಿಸಿಕೊಳ್ಳುವ ಎಲ್ಲ ಸಾಧ್ಯತೆಗಳು ಈಗಾಗಲೆ ತೋರುತ್ತಿವೆಯೆಂಬುದು ವಿಜ್ಞಾನಿಗಳ ನಿಖರವಾದ ವಾದವಾಗಿದೆ. ಇದರ ಪ್ರಮಾಣ ನಮಗೆ ಈ ಬಾರಿಯ ಬೇಸಿಗೆಯಲ್ಲಿ ಯುರೋಪ ಖಂಡದಲ್ಲಿ ಏರಿದ ತಾಪಮಾನಗಳನ್ನೇ ನೋಡಿದರೆ ಗೊತ್ತಾಗುತ್ತದೆ. ಈ ಬೇಸಿಗೆಯಲ್ಲಿ ಪ್ಯಾರಿಸ್ ನಗರ 42 ಡಿಗ್ರಿಗೂ ಮೀರಿದ ತಾಪಮಾನದಲ್ಲಿ ಓಲಾಡಿದ್ದು ಚಾರಿತ್ರಿಕ ದಾಖಲೆಯಾಗಿ ಬಿಟ್ಟಿದೆ. ಇದು ದೆಹಲಿಗೆ ಸೆಡ್ಡು ಹೊಡೆದು ನಿಲ್ಲುವಂತಹ ತಾಪಮಾನವಾದಂತೆ ತೋರುತ್ತಿದೆ.

ಮಳೆ ಚೆನ್ನಾಗಿ ಬಿದ್ದು ಮಹಾಪೂರವೇ ಹರಿಯುವ ಪ್ರಕ್ರಿಯೆ ಸಹಜವಾದದ್ದು ಮತ್ತು ಅದರಿಂದ ಮಣ್ಣು ಇನ್ನೂ ಸತ್ವಯುತವಾಗುತ್ತದೆಯೆಂಬುದು ನಮಗೆಲ್ಲ ತಿಳಿದ ವಿಷಯವೇ. ಇದನ್ನೆಲ್ಲವನ್ನೂ ಗಮನಿಸಿಕೊಂಡು ನಮ್ಮ ಹಿರಿಯರು ತಮ್ಮ ಮನೆಮಠಗಳನ್ನು ಈ ಮಹಾಪೂರಗಳನ್ನು ತಡೆದುಕೊಳ್ಳುವ ರೀತಿಯಲ್ಲಿ ಕಟ್ಟಿಕೊಳ್ಳುತ್ತಿದ್ದರು. ಜಾಗೆಗಳನ್ನು ಆರಿಸಿಕೊಳ್ಳುವಾಗಲೂ ಮಹಾಪೂರವನ್ನು ಗಮನಿಸಿಕೊಂಡೇ ತಮ್ಮ ಚಟುವಟಿಕೆಗಳನ್ನು ಅವರು ಕಟ್ಟಿಕೊಳ್ಳುತ್ತಿದ್ದರು. ಈಗ ಶಹರಗಳು, ಅದರಲ್ಲೂ ಬೆಂಗಳೂರು, ಚೆನ್ನೈ, ಮುಂಬೈನಂತಹ ಶಹರಗಳು ಕಳೆದ ಹಲವಾರು ದಶಕಗಳಲ್ಲಿ ಯಡ್ಡಾದಿಡ್ಡಿಯಾಗಿ ಬೆಳೆದು ಬಿಟ್ಟಿವೆ. ಮನಸ್ವಿ ಬೆಳವಣಿಗೆ ಪ್ರಕ್ರತಿಯ ಹಾದಿಯನ್ನು ಮುಚ್ಚಿ ಹಾಕುತ್ತಿದೆ. ಹಿಂದೆ ಮಳೆ ನೀರನ್ನು ಒಟ್ಟಾಗಿಸಿ ಹರಿಯಲು ಅನುವು ಮಾಡಿಕೊಡುತ್ತಿದ್ದ ತೊರೆ ಹಾಗೂ ಕೊಳಗಳನ್ನು ಮುಚ್ಚಿ ಹಾಕಿ ಅವುಗಳ ಮೇಲೆ ಆಕಾಶ ಚುಂಬಿತ ಕಟ್ಟಡಗಳನ್ನು ಎಬ್ಬಿಸಲಾಗುತ್ತಿದೆ. ಪಶ್ಚಿಮ ಘಟ್ಟಗಳಲ್ಲಂತೂ ಪರ್ವತ ಮಾಲೆಗಳನ್ನು, ಅವುಗಳನ್ನು ಆವರಿಸಿದ ದಟ್ಟ ಕಾಡುಮೇಡುಗಳನ್ನು ಕಡಿದು ಸುಂದರ ವಸತಿ ತಾಣಗಳನ್ನು ಕಟ್ಟಿ ಹಾಕಲಾಗುತ್ತಿದೆ. ರಸ್ತೆಗಳಿಗೆ, ರೈಲ್ವೆ ಹಳಿಗಳನ್ನು ಇರಿಸುವುದಕ್ಕೆ, ಅಣುಸ್ಥಾವರಗಳನ್ನು ವಿಸ್ತರಿಸುವುದಕ್ಕೆ, ನದಿಗಳನ್ನು ಜೋಡಿಸುವುದಕ್ಕೆ...ಹೀಗೆ ಹತ್ತು ಹಲವಾರು 'ಬೆಳವಣಿಗೆ'ಯುಕ್ತ ಅದ್ಭುತ ಕಾರ್ಯಕ್ರಮಗಳಿಗೆ ಪಶ್ಚಿಮ ಘಟ್ಟಗಳು ಎರವಾಗಿ ನಿಧಾನವಾಗಿ ತನ್ನ ಸಮತೋಲನವನ್ನೆ ಕಳೆದುಕೊಳ್ಳುತ್ತಿದೆ.

ಬಿದ್ದ ಮಳೆಯ ಹನಿಗಳು, ಹನಿಗಳಾದರೂ ತಮ್ಮ ದಾರಿಗಳನ್ನು ಹುಡುಕಿಕೊಳ್ಳಬೇಕಲ್ಲ? ಈ ಪುಟ್ಟ ಹನಿಗಳನ್ನು ಸ್ವಾಗತಿಸಿ ತನ್ನ ಉದರದೊಳಕ್ಕೆ ಇರಿಸಿಕೊಳ್ಳುವ ಪಶ್ಚಿಮ ಘಟ್ಟದ ಪರಿಯು ಈಗ ನಶಿಸಿ ಹೋಗುತ್ತಿದೆ. ಈ ಘಟ್ಟಗಳ ಮೈಮೇಲೆ ಕವಚಗಳಂತೆ ಆವರಿಸಿಕೊಂಡಿದ್ದ ಕಾನನಗಳನ್ನು ನಾವು ನಿಧಾನವಾಗಿ ಕಳಚಿ ಹಾಕುತ್ತಿದ್ದೇವೆ. ಲಕ್ಷಾಂತರ ವರುಷಗಳಿಂದ ತನ್ನ ಬದುಕನ್ನು ನಮಗೆಲ್ಲರಿಗಾಗಿ ಕಟ್ಟಿಕೊಂಡು ಜಗತ್ತಿನ ಉಸಿರಿನ ತಾಣವಾಗಿರುವ ನಮ್ಮ ಈ ಪಶ್ಚಿಮ ಘಟ್ಟಗಳಿಗೆ ನಾವು ಶರಣಾಗದಿದ್ದರೆ ಈ ಮಳೆಗಾಲದ ಮಹಪೂರದ ಆವಾಂತರಗಳು ನಮ್ಮನ್ನು ಬಿಟ್ಟಿದ್ದಲ್ಲ. ಏನೆ 'ಸಾಧನೆ', 'ಬೆಳವಣಿಗೆ' ಮಾಡುವುದಿದ್ದರೂ ಈ ಪಶ್ಚಿಮ ಘಟ್ಟಗಳ ಮೌನದ ಪಿಸುಮಾತುಗಳನ್ನು ಕೇಳಿಸಿಕೊಳ್ಳುವ ರೂಡಿಯನ್ನು ನಾವು ಬೆಳಸಿಕೊಳ್ಳಬೇಕು. ಅದಾಗದಿದ್ದರೆ, ಈ ಎಲ್ಲ ಆವಾಂತರಗಳಿಗೆ ವರ್ಷವರ್ಷವೂ ನಾವು ತಯಾರಾಗಿ ಕುಳಿತುಕೊಳ್ಳಬೇಕು.

***ಡಾ. ವೆಂಕಟಾಚಲ ಹೆಗಡೆ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ ಮತ್ತು ಸದಸ್ಯರೆ,

ಈ ಬಾರಿ ನಮ್ಮ ಕರ್ನಾಟಕದಲ್ಲಿ ಅತಿವೃಷ್ಟಿಯಾಗಿ ಸಾವಿರಾರು ಕೋಟಿಗಳ ನಷ್ಟವಾಗಿದೆ. ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಸರ್ಕಾರವು ತನ್ನದೇ ಆದ ಕೊಡುಗೆಯನ್ನು ನೀಡಿದೆ. ಅದೇ ರೀತಿ ದೆಹಲಿ ಕರ್ನಾಟಕ ಸಂಘವೂ ನಮ್ಮ ತಾಯಿನಾಡಿಗೆ ರೂಪಾಯಿ ಐದು ಲಕ್ಷ ಮತ್ತು ದೆಹಲಿಯ ಇತರ ಕನ್ನಡ ಸಂಘ ಸಂಸ್ಥೆಗಳು ಹಾಗೂ ಸದಸ್ಯರು ನೀಡಿದ ಹಣವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡುತ್ತಿದ್ದೇವೆ. ಈಗಾಗಲೇ ಪ್ರಕಟಿಸಿದ ಹಾಗೆ ಪರಿಹಾರ ನಿಧಿಗೆ ಕೊಟ್ಟ ಸಂಘ ಸಂಸ್ಥೆಗಳು ಮತ್ತು ಸದಸ್ಯರು ನೀಡಿದ ಹಣದ ವಿವರವನ್ನು ನಮ್ಮ ಸಂಘದ ಮುಖಪತ್ರಿಕೆ ಅಭಿಮತದಲ್ಲಿ ಪ್ರಕಟಿಸಿದ್ದೇವೆ.

ಮತ್ತೊಮ್ಮೆ ತಮ್ಮಲ್ಲಿ ಕೋರಿಕೆ ಏನೆಂದರೆ ತಮ್ಮ ಕೈಯಲ್ಲಾದಷ್ಟು ಹಣವನ್ನು ದೆಹಲಿ ಕರ್ನಾಟಕ ಸಂಘದ ಬ್ಯಾಂಕ್ ಖಾತೆಗೆ ಜಮಾ ಮಾಡಿ ಈ ಯಶಸ್ವಿ ಕಾರ್ಯದಲ್ಲಿ ತಾವೂ ಭಾಗಿಯಾಗಿ.

ಸಂಕಷ್ಟದ ಸಮಯದಲ್ಲಿ ಒಂದೆರಡು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮುಂದೂಡಲಾಗಿತ್ತು. ಆದರೂ ಕರ್ನಾಟಕ ಸೇರಿದಂತೆ ವಿವಿಧೆಡೆ ಅತಿವೃಷ್ಟಿಯಿಂದ ಸಂತ್ರಸ್ತರಾದ ಜನರ ನೆರವಿಗೆ ಶ್ರೀ ಹಂಡೆದಾಸ ಪ್ರತಿಷ್ಠಾನದ ಹರಿಕಥಾ ವಿದೂಷಿ ಶ್ರೀಮತಿ ರುಕ್ಮಿಣಿ ಹಂಡೆಯವರಿಂದ ಹರಿಕಥೆ, ಕು. ದಿಶಾ ಪಿ. ರಾವ್ ಅವರಿಂದ ವೀಣಾವಾದನ ಮತ್ತು ಯೋಗಪಟು ಬಾಲಕ ಪ್ರಿಯದರ್ಶನ್ ಅವರಿಂದ ಯೋಗ ಪ್ರದರ್ಶನ ಕಾರ್ಯಕ್ರಮವನ್ನು ಸಂಘ ಆಯೋಜಿಸಿತ್ತು.

ಈ ತಿಂಗಳು ಮೂರು ವೈವಿಧ್ಯಮಯ ಕಾರ್ಯಕ್ರಮಗಳಿವೆ. ಸೆಪ್ಟೆಂಬರ್ 21 ಮತ್ತು 22ರಂದು ವರಕವಿ ಬೇಂದ್ರೆ ಕುರಿತ ರಾಷ್ಟ್ರೀಯ ವಿಚಾರಸಂಕಿರಣ, ಸೆಪ್ಟೆಂಬರ್ 28ರಂದು ಕಲಾವಿದೆ ದಿವ್ಯಾರವಿ ಅವರ ಭರತನಾಟ್ಯ ಹಾಗೂ ಸೆಪ್ಟೆಂಬರ್ 29ರಂದು 'ಮಹಿಷ ಮರ್ದಿನಿ' ಯಕ್ಷಗಾನವಿದೆ. ದಯವಿಟ್ಟು ಬನ್ನಿ.

ನವೆಂಬರ್ ತಿಂಗಳಲ್ಲಿ ಸ್ಥಳೀಯರಿಗೆ ನೃತ್ಯ ಮತ್ತು ಸಂಗೀತ ತರಬೇತಿ ನೀಡಲಿದ್ದೇವೆ. ವಾರ್ಷಿಕ ಆಟೋಟ ಸ್ಪರ್ಧೆಗಳು ಮತ್ತು ಕ್ರಿಕೆಟ್ ಪಂದ್ಯಾವಳಿ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ನಡೆಯಲಿದೆ. ನೀವೆಲ್ಲರೂ ಭಾಗಿಯಾಗಿ.

ಇದರ ಜೊತೆಗೆ ಒಂದು ಸಿಹಿ ಸುದ್ದಿ ಇದೆ. ಪ್ರತೀ ವರ್ಷದಂತೆ ಈ ವರ್ಷವೂ ಸಹ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ರೂಪಾಯಿ ಹತ್ತು ಲಕ್ಷ ಅನುದಾನವನ್ನು ತರುವಲ್ಲಿ ಸಂಘ ಯಶಸ್ವಿಯಾಗಿದೆ. ಇದೀಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೂತನ ಸಚಿವರಾಗಿ ಬಂದಿರುವ ಸನ್ಮಾನ್ಯ ಸಿ.ಟಿ. ರವಿಯವರನ್ನು ಭೇಟಿಯಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಇನ್ನೂ ಅನುದಾನವನ್ನು ನೀಡಲು ಕೋರಿಕೆಯನ್ನು ನಾವು ಸಲ್ಲಿಸಿದ್ದೇವೆ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**ಸೆಪ್ಟೆಂಬರ್ 21 ಮತ್ತು 22, 2019 ಶನಿವಾರ ಮತ್ತು ಭಾನುವಾರ ಬೆಳಿಗ್ಗೆ 10.30ರಿಂದ**

**ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ,**

**ದೆಹಲಿ ಕರ್ನಾಟಕ ಸಂಘ**

**ಹಾಗೂ**

**ಇಂದಿರಾಗಾಂಧಿ ಆದಿವಾಸಿ ವಿಶ್ವವಿದ್ಯಾಲಯ, ಅಮರಕಂಟಕ**

**ಇವರ ಸಂಯುಕ್ತಾಶ್ರಯದಲ್ಲಿ ಎರಡು ದಿನಗಳ**

**ರಾಷ್ಟ್ರೀಯ ವಿಚಾರ ಸಂಕಿರಣ**

### ದ.ರಾ. ಬೇಂದ್ರೆ : ಆಧುನಿಕ ಭಾರತೀಯ ಕಾವ್ಯ ಪರಂಪರೆ

**ಸೆಪ್ಟೆಂಬರ್ 28, 2019 ಶನಿವಾರ**

**ಸಂಜೆ : 6.00ಗಂಟೆಗೆ**

**ದಿವ್ಯಾ ರವಿ,**
**ಬೆಂಗಳೂರು**
**ಇವರಿಂದ**
**'ಭರತನಾಟ್ಯ'**



**ಸೆಪ್ಟೆಂಬರ್ 29, 2019 ಭಾನುವಾರ**

**ಸಂಜೆ : 6.00ಗಂಟೆಗೆ**

**ಶ್ರೀ ಕುಮಾರ ಸಾಂಸ್ಕೃತಿಕ ಪ್ರತಿಷ್ಠಾನ (ರಿ)**
**ಹಳುವಳ್ಳಿ ತಂಡದಿಂದ**

**ಯಕ್ಷಗಾನ**

**'ಮಹಿಷ ಮರ್ದಿನಿ'**

**ಹಿಮ್ಮೇಳ**
**ಭಾಗವತರು : ಕು. ಅಮೃತ ಅಡಿಗ**
**ಚೆಂಡೆ : ಕೌಶಿಕ್ ರಾವ್**
**ಮದ್ದಳೆ : ಸತ್ಯನಾರಾಯಣ ಅಡಿಗ**



# ರಂಜಿಸಿದ ಹರಿಕಥೆ, ವೀಣಾವಾದನ, ಯೋಗಪ್ರದರ್ಶನ



**ಕಲಾವಿದೆ ರುಕ್ಮಿಣಿ ಹಂಡೆ**

ಇಂದಿನ ಪಾಶ್ಚಾತ್ಯ ಡಿಜೆ ಸಂಸ್ಕೃತಿಯ ನಡುವೆ ನಮ್ಮ ಪೂರ್ವಿಕರ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಮಾಡಬೇಕಾಗಿದೆ ಎಂದು ಶ್ರೀ ಹಂಡೆದಾಸ ಪ್ರತಿಷ್ಟಾನದ ಹರಿಕಥಾ ವಿದೂಷಿ ಶ್ರೀಮತಿ ರುಕ್ಮಿಣಿ ಹಂಡೆ ಇವರು ತಿಳಿಸಿದರು. ಕರ್ನಾಟಕ ಸೇರಿದಂತೆ ದೇಶದ ವಿವಿಧ ಪ್ರದೇಶಗಳಲ್ಲಿ ಸಂಭವಿಸಿದ ಅತಿವೃಷ್ಟಿಯಿಂದ ಸಂತ್ರಸ್ತರ ನೆರವಿಗಾಗಿ ದೆಹಲಿಯ ಕರ್ನಾಟಕ ಸಂಘದ ಸಭಾಂಗಣದಲ್ಲಿ ಆಗಸ್ಟ್ 18 ರಂದು ನಡೆದ ಹರಿಕಥೆ, ವೀಣಾ ವಾದನ ಮತ್ತು ಯೋಗ ಪ್ರದರ್ಶನ ಕಾರ್ಯಕ್ರಮದಲ್ಲಿ ನಡೆದ 'ಭಕ್ತ ಕನಕದಾಸರು' ಹರಿಕಥೆಯ ನಡೆಸಿಕೊಡುವ ಸಂದರ್ಭ ಅವರು ಹೇಳಿದರು.



**ಯೋಗಪಟು ಬಾಲಕ ಪ್ರಿಯದರ್ಶನ್**

ಹರಿಕಥೆಯಲ್ಲಿ ಇಡೀ ಮಾನವ ಜೀವನದ ಅನುಭವಗಳನ್ನು ಎಳೆ ಎಳೆಯಾಗಿ ಬಿಡಿಸಿ, ಸಮಯಕ್ಕೆ ತಕ್ಕಂತೆ ದೃಷ್ಠಾಂತಗಳ ಮೂಲಕ ಮನ ಮುಟ್ಟುವಂತೆ ವಾಚನ ಮಾಡಿದರು. ಭಕ್ತ ಕನಕದಾಸರ ಹುಟ್ಟು ಹಾಗು ಅವರ ಜೀವನ ವೈರಾಗ್ಯ,ಲೌಕಿಕದ ಅನುಭವ, ಹಾಗು ಪಾರಮಾರ್ಥದೆಡೆಗಿನ ಅವರ ತುಡಿತ ಮುಂತಾದ ವಿಷಯದ ಕುರಿತು ಸವಿಸ್ತಾರವಾಗಿ ವಾಚಿಸಿದರು. ನಿಷ್ಕಳಂಕ ಭಕ್ತಿಗೆ ಆ ಭಗವಂತ ಸುಲಭದಲ್ಲಿ ಒಲಿಯುವನೇ ಹೊರತು, ಬಾಹ್ಯ ಆಡಂಬರಕ್ಕಲ್ಲ ಎಂಬ ವಿಚಾರವನ್ನು ಅತ್ಯಂತ ಸುಂದರವಾಗಿ ನಿರೂಪಣೆ ಮಾಡಿದರು. ನಿರರ್ಗಳ ನಿರೂಪಣೆ, ಸ್ಮರಣ ಶಕ್ತಿ, ವಿಷಯದ ಪ್ರಭುತ್ವ, ಸ್ಪಷ್ಟವಾದ ಉಚ್ಚಾರಣೆ ಹಾಗೂ ಸಾಂದರ್ಭಿಕ ದೃಷ್ಟಾಂತಗಳ ಮೂಲಕ ತಿಳಿಸಿದರು. ಸಂದರ್ಭಕ್ಕೆ ತಕ್ಕಂತೆ ಕಥೆಗೆ ಸಂಬಂಧಿಸಿದ ಹಾಡುಗಾರಿಕೆಯ ಸಮನ್ವಯತೆಯೊಂದಿಗೆ ಭಕ್ತ ಕನಕದಾಸರ ಹರಿಕಥೆಯನ್ನು ಆಲಿಸುವ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದರು.

ಇವರಿಗೆ ಹಿನ್ನೆಲೆಯಾಗಿ ಕೀ ಬೋರ್ಡ್‌ನಲ್ಲಿ ಶ್ರೀ ಪ್ರಕಾಶ್ ರಾವ್, ವೀಣೆಯಲ್ಲಿ ಕು. ದಿಶಾ ಪಿ.ರಾವ್, ಉಡುಪಿ, ತಬಲಾದಲ್ಲಿ ದೆಹಲಿಯ ಕರ್ನಾಟಕ ಬ್ಯಾಂಕಿನ ಉದ್ಯೋಗಿ ಶ್ರೀ ಮಂಜುನಾಥ ನಾಯಕ ಅವರು ಸಾಥ್ ನೀಡಿದರು. ಹರಿಕಥೆಗೆ ಇನ್ನೂ ಸಮಯ ಬೇಕೆನಿಸಿತು.

ಡೊಂಕು ಬಾಲದ ನಾಯಕರೇ ನೀವೇನೂಟವ ಮಾಡಿದಿರಿ, ಕನಕ ಕುಟ್ಟೋ ಅಲ್ಲಿಗೆ ಹೋಗಿ, ಹಣಿಕಿ ಇಣಿಕಿ ನೋಡುವಿರಿ, ಕನಕ ಕುಟ್ಟೋ ಒನಕೆಲಿ ಬಡಿದರೆ ಎಂಬ ಹಾಡಿನೊಂದಿಗೆ ಬಾಲ ಕಲಾವಿದ ಶ್ರೀ ಕೃಷ್ಣರಾಜ್ ಹಾಗೂ ಶ್ರೀಮತಿ



**ಕಲಾವಿದೆ ಕು. ದಿಶಾ ಪಿ. ರಾವ್**

ಸವಿತಾ ನೆಲ್ಲಿ ದಂಪತಿಗಳ ಮಕ್ಕಳಾದ ಋತ್ವಿಕ್ ನೆಲ್ಲಿ, ಅವನಿ ನೆಲ್ಲಿ ಅವರು ಸೊಗಸಾಗಿ ಹಾಡಿದರು.

ಇಂತಹ ಒಂದು ಯಶಸ್ವಿ ಪ್ರಯತ್ನಕ್ಕೆ ಸಹಾಯ ಸಹಕಾರ ನೀಡಿದ ದೆಹಲಿ ಕರ್ನಾಟಕ ಸಂಘ ಅಭಿನಂದನಾರ್ಹವಾಗಿದೆ.

ಇದೇ ಸಂದರ್ಭದಲ್ಲಿ ಉಡುಪಿಯ ಕು. ದಿಶಾ ಪಿ. ರಾವ್ ಅವರಿಂದ ವೀಣಾವಾದನ ಮತ್ತು ಮೈಸೂರಿನ ದಿ ಆಕ್ಸ್‌ಫರ್ಡ್ ಸ್ಕೂಲ್‌ನ ವಿದ್ಯಾರ್ಥಿಯಾದ ಪ್ರಿಯದರ್ಶನ್ ಅವರಿಂದ ಅದ್ಭುತವಾದ ಯೋಗಪ್ರದರ್ಶನ ನೆರವೇರಿತು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಪ್ರಧಾನ ಕಾರ್ಯದರ್ಶಿ ಸಿ.ಎಂ.ನಾಗರಾಜ ಹಾಗೂ ಪದಾಧಿಕಾರಿಗಳು, ಜಾನಪದ ವಿದ್ವಾಂಸ, ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಡಾ. ಪುರುಷೋತ್ತಮ ಬಿಳಿಮಲೆ ಹಾಗೂ ಇತರರು ಉಪಸ್ಥಿತರಿದ್ದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಪೂಜಾ ರಾವ್ ಅವರು ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

***ಎಸ್. ಕುಮಾರ್***



**ಕು. ಋತ್ವಿಕ್ ಮತ್ತು ಕು. ಅವನಿ ನೆಲ್ಲಿ**



**ದೆಹಲಿ ಕರ್ನಾಟಕ ಸಂಘವು 73ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿತು. ಬೆಳಗ್ಗೆ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಧ್ವಜಾರೋಹಣ ಮಾಡಿದರು. ಧ್ವಜಾರೋಹಣ ಹಾಗೂ ದೇಶಭಕ್ತಿ ಗೀತೆಗಳ ಜೊತೆಗೆ ರಾಷ್ಟ್ರಗೀತೆಯನ್ನು ಹಾಡಿ ಗೌರವ ಸಲ್ಲಿಸಲಾಯಿತು.**

## ಮನವಿ

ಕರ್ನಾಟಕದ ಹಲವು ಭಾಗಗಳಲ್ಲಿ ಈಚೆಗೆ ಭೀಕರ ಮಳೆಯಿಂದಾಗಿ ಜನರು ಅತೀವ ಸಂಕಷ್ಟಕ್ಕೊಳಾಗಿದ್ದು ತುಂಬಾ ಕಷ್ಟ ಹಾಗೂ ನೋವನ್ನು ಅನುಭವಿಸುತ್ತಿರುವುದು ತಮಗೆಲ್ಲಾ ತಿಳಿದಿದೆಯಷ್ಟೆ. ಈ ಸಂದರ್ಭದಲ್ಲಿ ಅವರ ಕಷ್ಟಗಳಿಗೆ ಸ್ಪಂದಿಸಬೇಕಾಗಿದ್ದು ನಮ್ಮ ಆದ್ಯ ಕರ್ತವ್ಯ. ಈಗಾಗಲೇ ದೆಹಲಿ ಕನ್ನಡಿಗರು ಈ ಸಂಕಷ್ಟಕ್ಕೆ ಸ್ಪಂದಿಸಿ ನೆರವಿನ ಧನ ಸಹಾಯ ನೀಡಿದ್ದಾರೆ. ದೆಹಲಿ ಕರ್ನಾಟಕ ಸಂಘದ ಜೊತೆಗೆ ತಾವೂ ಕೂಡಾ ತಮ್ಮ ಸಹಾಯ ಹಸ್ತವನ್ನು ನೀಡಿ ಸ್ಪಂದಿಸಬೇಕೆಂದು ವಿನಂತಿ.

ಧನಸಹಾಯ ಮಾಡುವವರು ಸಂಘದ ಕಚೇರಿಯಲ್ಲಿ ಹಣವನ್ನು ಪಾವತಿಸಬಹುದು ಅಥವಾ ನೇರವಾಗಿ ಸಂಘದ ಬ್ಯಾಂಕ್ ಖಾತೆಗೆ ಜಮಾ ಮಾಡಬಹುದು.

ಒಟ್ಟು ಮೊತ್ತವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಕಳುಹಿಸಿಕೊಡಲಾಗುವುದು ಮತ್ತು ದೇಣಿಗೆ ನೀಡಿದವರ ಹೆಸರುಗಳನ್ನು ಸಂಘದ ಮುಂಬರುವ ಅಭಿಮತ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ತಮ್ಮ ಸಲಹೆ ಹಾಗೂ ಮಾರ್ಗದರ್ಶನಗಳಿಗೆ ಸ್ವಾಗತ. ಹಣ ಪಾವತಿ ಮಾಡುವ ಬ್ಯಾಂಕ್ ಖಾತೆ ವಿವರ :

**Bank Details :**

**Account Name :**
**Delhi Karnataka Sangha**
**Account No. :**
**C/A: 550 200 0100 000 101**
**Name of the Bank :**
**Karnataka Bank Ltd.**
**Branch :**
**R.K.Puram, New Delhi**
**IFSC Code :**
**KARB0000550**

**(ಬ್ಯಾಂಕ್ ಖಾತೆಗೆ ಹಣ ಪಾವತಿಸಿದವರು ಸಂಘದ ಕಾರ್ಯಾಲಯಕ್ಕೆ ದೇಣಿಗೆಯ ವಿವರಗಳನ್ನು ತಿಳಿಸಬೇಕಾಗಿ ವಿನಂತಿ)**



**ಕರ್ನಾಟಕ ಫುಡ್ ಸೆಂಟರ್‌ನ ವತಿಯಿಂದ ರೂ. 25,000/– ದೇಣಿಗೆ ನೀಡಿದ ಉದ್ಯಮಿ ಶ್ರೀ ಶೇಖರ ಬಂಗೇರ**

## ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆ ನೀಡಿದವರು

| | | |
|---|---|---|
| 1. | ನಾಡಪ್ರಭು ಕೆಂಪೇಗೌಡ ಫೌಂಡೇಶನ್ | 25,000.00 |
| 2. | ಕರ್ನಾಟಕ ಫುಡ್ ಸೆಂಟರ್ | 25,000.00 |
| 3. | ಕೆ.ಎಸ್. ಮೂರ್ತಿ | 5,000.00 |
| 4. | ಶ್ರೀಮತಿ ಆರಾಧನಾ ಕೆ.ಸಿ. | 5,000.00 |
| 5. | ಗಣೇಶ ರಾವ್ | 5,000.00 |
| 6. | ಶ್ರೀಗಣೇಶ ಮಿತ್ರ ಮಂಡಳ | 5,000.00 |
| 7. | ಡಾ. ವೆಂಕಟಾಚಲ ಜಿ. ಹೆಗಡೆ | 5,000.00 |
| 8 | ಪ್ರವೀಣ್ ಶೀಗಿಹೊಳಿ | 2,500.00 |
| 9 | ಗೋಪಾಲಕೃಷ್ಣ ಕೆ.ಆರ್ | 1,001. 00 |
| 10. | ನವಯುಗ್ ಮತ್ತು ಕ್ಷಿತಿಜ್ (ರೂಪಶ್ರೀ ನರಸಿಂಹಮೂರ್ತಿ) | 1,000. 00 |
| 11. | ಓಂಕಾರೇಶ್ವರ ಚಂದ್ರಶೇಖರ | 1,000. 00 |
| 12. | ವಿವೇಕಾನಂದ ರಾವ್ | 1,000. 00 |
| 13. | ಎನ್.ಎ. ಮಾಧವ | 1,000. 00 |
| 14 | ಶ್ರೀಮತಿ ರಾಧಾ ಕೌಜಲಗಿ | 1,000. 00 |
| 15. | ಶ್ರೀಮತಿ ಜಯಾ ಆಚಾರ್ಯ | 1,000. 00 |
| 16. | ಶ್ರೀಮತಿ ಸುಮಿತಾ ಮುರಗೋಡ | 1,000. 00 |
| 17. | ರಾಜೇಶ್ ಇ.ವಿ., ಹೀರೋ ಹೋಂಡಾ, ಗುರುಗಾಂವ್ | 1,000. 00 |
| 18. | ಶ್ರೀ ವೈ. ಎ. ಕೊಪ್ಪದ್ | 500. 00 |
| 19. | ಶ್ರೀಮತಿ ಸೌಭಾಗ್ಯ ಆನಂದ್ | 500. 00 |
| 20. | ಶ್ರೀ ರಾಜ ಕುಮಾರ್ | 500. 00 |
| 21. | ಶ್ರೀಮತಿ ಲೀಲಾ ದೇವರಾಜ್ | 500. 00 |
| | ಒಟ್ಟು | 88,501.00 |




ನಾಡಪ್ರಭು ಕೆಂಪೇಗೌಡ ಫೌಂಡೇಷನ್ ವತಿಯಿಂದ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ರೂ. 25,000/–ನೀಡಿದರು.




ಗಣೇಶ ಮಿತ್ರ ಮಂಡಳಿಯ ವತಿಯಿಂದ ಶ್ರೀ ಶಶಿಕಾಂತ ಪಿ. ಪಾಟೀಲ ಅವರು ರೂ. 5,000/– ದೇಣಿಗೆ ನೀಡಿದರು.

**ರೂ. 5,000/– ದೇಣಿಗೆ ನೀಡಿದವರು**



ಗಣೇಶ ರಾವ್



ಡಾ. ವೆಂಕಟಾಚಲ ಜಿ. ಹೆಗಡೆ



ಕೆ.ಎಸ್. ಮೂರ್ತಿ



ಆರಾಧನಾ ಕೆ.ಸಿ.

# ಕು.ರಚನಾ ಮತ್ತು ಕು. ಎಂ. ಪ್ರಿಯಾಂಕ ಯಶಸ್ವಿ ರಂಗ ಪ್ರವೇಶ



ಕು. ರಚನಾ




ಕು. ಪ್ರಿಯಾಂಕ

ನವದೆಹಲಿಯ ಕರ್ನಾಟಕ ಭವನದ ವ್ಯವಸ್ಥಾಪಕರಾದ ಶ್ರೀ ಓ. ಜಗದೀಶ್ ಹಾಗೂ ಶ್ರೀಮತಿ ಜ್ಯೋತಿ ಜಗದೀಶ್ ದಂಪತಿಗಳ ಪುತ್ರಿ ಕು. ರಚನಾ ಹಾಗೂ ಕರ್ನಾಟಕ ಭವನದ ಶ್ರೀ ಮಂಜುನಾಥ ಹಾಗೂ ಶ್ರೀಮತಿ ಮಮತಾ ಮಂಜುನಾಥ ದಂಪತಿಯ ಪುತ್ರಿ ಕು. ಪ್ರಿಯಾಂಕ ಇವರ ಭರತನಾಟ್ಯ ರಂಗಪ್ರವೇಶ ದಿನಾಂಕ: 23.08.2019ರಂದು ದೆಹಲಿ ಕರ್ನಾಟಕ ಸಂಘದ ರಂಗ ಮಂದಿರದಲ್ಲಿ ಸಂಭ್ರಮ ಮತ್ತು ಸಡಗರದಿಂದ ಜರುಗಿತು.

ಭರತ ನಾಟ್ಯ ಪ್ರಕಾರಗಳಾದ ಪುಷ್ಪಾಂಜಲಿ, ಅಲಾರಿಪು, ಜತ್ತಿಸ್ವರಂ ಮತ್ತು ವರ್ಣಂ ಪ್ರಕಾರಗಳನ್ನು ಕು. ರಚನಾ ಮತ್ತು ಎಂ. ಪ್ರಿಯಾಂಕ ಅವರು ಉತ್ತಮ ಪ್ರದರ್ಶನ ನೀಡಿ, ಸಭಾಂಗಣದಲ್ಲಿ ಕಿಕ್ಕಿರಿದು ತುಂಬಿದ ಪ್ರೇಕ್ಷಕರ ಮನ ರಂಜಿಸಿದರು.

ಕು. ರಚನಾ ಹಾಗೂ ಕು. ಪ್ರಿಯಾಂಕಾ ಅವರಿಗೆ ಶಾಸ್ತ್ರೀಯ ನೃತ್ಯ ಪ್ರಕಾರಕ್ಕೆ ಅಗತ್ಯ ತರಬೇತಿ ನೀಡಿ, ಈ ಪ್ರತಿಭೆಗಳನ್ನು ಬೆಳಕಿಗೆ ತಂದ ಕೀರ್ತಿ ಇವರ ಗುರು ವಿದುಷಿ ಡಾ. ವೈದ್ಯನಾಥನ್ ಅವರಿಗೆ ಸಲ್ಲುತ್ತದೆ. ಭರತನಾಟ್ಯಕ್ಕೆ ವಾದ್ಯ ಹಾಗೂ ಹಿನ್ನೆಲೆ ಸಂಗೀತದಲ್ಲಿ ಶ್ರೀಮತಿ ಆದಿಶ್ರೀ ಖಂಡವಲ್, ಶ್ರೀಮತಿ ವಿಜಯಶ್ರೀ, ಶ್ರೀ ಶಂಕರ್ ಮತ್ತು ಶ್ರೀ ಅಣ್ಣಾದೊರೈ ಅವರು ಉತ್ತಮ ಸಂಗೀತ ನೀಡಿದರು. ಹೃದಯಸ್ಪರ್ಶಿ ಆಕರ್ಷಕ ರಂಗ ಸಜ್ಜಿಕೆಯಿಂದಾಗಿ ಭರತನಾಟ್ಯ ರಂಗಪ್ರವೇಶದ ಕಾರ್ಯಕ್ರಮ ಅತ್ಯುತ್ತಮವಾಗಿ ಪ್ರದರ್ಶನ ಕಂಡಿತು.

ಭರತ ನಾಟ್ಯ ರಂಗಪ್ರವೇಶ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ನವದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಶ್ರೀ ನಿಲಯ ಮಿತಾಶ್, ಮಾಜಿ ಸಚಿವರಾದ ಶ್ರೀ ಹೆಚ್. ವಿಶ್ವನಾಥ್ ಮತ್ತು ದೂರದರ್ಶನದ ಮಾಜಿ ಅಪರ ನಿರ್ದೇಶಕರಾದ ನಾಡೋಜ ಡಾ. ಮಹೇಶ್ ಜೋಷಿ ಉಪಸ್ಥಿತರಿದ್ದು ಹಿತನುಡಿಗಳನ್ನಾಡಿ ಭರತ ನಾಟ್ಯ ನೃತ್ಯ ಪ್ರತಿಭೆಗಳಿಗೆ ಆಶೀರ್ವದಿಸಿದರು.



ಮಾಜಿ ಸಚಿವ ಹೆಚ್. ವಿಶ್ವನಾಥ್ ಮಾತನಾಡಿದರು

ಕಾರ್ಯಕ್ರಮದಲ್ಲಿ ಕರ್ನಾಟಕ ಭವನದ ಅಧಿಕಾರಿ, ಸಿಬ್ಬಂದಿ ವರ್ಗದವರು ಹಾಗೂ ಅವರ ಕುಟುಂಬದವರು, ದೆಹಲಿಯ ಕನ್ನಡಿಗರು ಹಾಗೂ ಭರತನಾಟ್ಯ ನೃತ್ಯಾಸಕ್ತರು ಉಪಸ್ಥಿತರಿದ್ದು, ಕಾರ್ಯಕ್ರಮದ ಯಶಸ್ವಿಗೆ ಕಾರಣೀಭೂತರಾದರು.

ಡಾ. ಮಹೇಶ್ ಜೋಷಿ ಅವರು ಮಾತನಾಡಿ ನಾಲ್ಕು ವೇದಗಳು ಒಂದು ಬಗೆಯಾದರೆ ಐದನೇ ವೇದ ಪಂಚಮ ವೇದವೆಂದು ತಿಳಿಸಿ, ನೃತ್ಯದ ಹುಟ್ಟಿನ ಕುರಿತಾಗ ಸಮಗ್ರ ಮಾಹಿತಿ ನೀಡಿದರು.

'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬಂತೆ ಈ ಇರ್ವರೂ ನೃತ್ಯಾಭ್ಯಾಸದಲ್ಲಿ ಕಠಿಣ ಪರಿಶ್ರಮ ಮಾಡುವ ಮೂಲಕ ಯಶಸ್ಸು ತಮ್ಮದಾಗಿಸಿಕೊಳ್ಳಬೇಕೆಂದು ನಿಲಯ ಮಿತಾಶ್ ಅವರು ಹಾರೈಸಿದರು.

ಈ ಕಲಾವಿದೆಯರ ಶೈಕ್ಷಣಿಕ ಗುರುಗಳಾದ ನವದೆಹಲಿಯ ಆರ್.ಕೆ. ಪುರಂನ ಸೆಕ್ಟರ್ 8ರ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲ ಶ್ರೀಮತಿ ಭಾರತಿ ಸಕ್ಸೇನ ಮತ್ತು ಶ್ರೀಮತಿ ಮಮತಾ ಶಂಕರ್, ಸೆಕ್ಟರ್ 2ರ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲ ಔದೇಶ್‌ದುಬೆ ಇವರು ಭಾಗವಹಿಸಿ ಭರತನಾಟ್ಯ ರಂಗಪ್ರವೇಶ ಮಾಡಿ ಕಲಾವಿದರಿಗೆ ಶುಭ ಹಾರೈಸಿದರು.

**ಎಸ್. ಕುಮಾರ್**

# ಶಿವಮೊಗ್ಗದಲ್ಲಿ ಪ್ರೊ. ಪುರುಷೋತ್ತಮ ಬಿಳಿಮಲೆ ಅವರ 'ಕನ್ನಡ ಕಥನಗಳು' ಬಿಡುಗಡೆ




'ಭಾರತದ ಬಹುರೂಪವನ್ನು ಬಹುಧಾರೆಗಳಲ್ಲಿ ಹಿಡಿದಿಡುವಂತಹ ಪ್ರಯತ್ನ 'ಕನ್ನಡ ಕಥನಗಳು' ಕೃತಿಯಲ್ಲಿದೆ ಎಂದು ವಿಮರ್ಶಕಿ ಡಾ. ವಿನಯಾ ಒಕ್ಕುಂದ ಹೇಳಿದರು. ಶಿವಮೊಗ್ಗದ ಜಿಲ್ಲಾ ಸರ್ಕಾರಿ ನೌಕರರ ಸಭಾಂಗಣದಲ್ಲಿ ಅಹರ್ನಿಶಿ ಪ್ರಕಾಶನ ಮತ್ತು ಹೊಂಗಿರಣ ಸಂಸ್ಥೆಯ ಸಹಯೋಗದಲ್ಲಿ ಶನಿವಾರ ಏರ್ಪಡಿಸಿದ್ದ ಡಾ. ಪುರುಷೋತ್ತಮ ಬಿಳಿಮಲೆ ಅವರ 'ಕನ್ನಡ ಕಥನಗಳು' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪುಸ್ತಕದ ಬಗ್ಗೆ ಮಾತನಾಡಿದರು.

ಈ ಕೃತಿಯು ಒಂದು ಕಾದಂಬರಿ, ಕಾವ್ಯ, ಪ್ರವಾಸ, ಆತ್ಮಚರಿತ್ರೆ ಹೀಗೆ ಎಲ್ಲವನ್ನೂ ಓದಿದ ಅನುಭವ ನೀಡುವಂತದ್ದಾಗಿದೆ. ಇಂದಿನ ಕಾಲದ ಸಂಶೋಧನೆ ಯಾವ ತಾತ್ವಿಕತೆಯನ್ನು ಒಳಗೊಳ್ಳಬೇಕು ಅನ್ನುವಂತಹ ಬಹುಮುಖ್ಯವಾದ ಚರ್ಚೆಯನ್ನು ಲೇಖಕರು ಮಾಡಿದ್ದಾರೆ. ಪಠ್ಯಗಳ ಮರುಪಠ್ಯೀಕರಣವನ್ನು ಅದ್ಭುತವಾಗಿ ಇಲ್ಲಿ ತೋರಿಸಲಾಗಿದೆ. ಇಲ್ಲಿರುವ ಒಂಬತ್ತು ಲೇಖನಗಳಲ್ಲಿ ಎರಡು ಲೇಖನಗಳು ಕನ್ನಡದ ಮೂಲಕ ಇಡೀ ಲೋಕದೃಷ್ಟಿಯನ್ನು ರೂಪಿಸಿಕೊಳ್ಳಬಹುದಾದ ಕ್ರಮ ಹೇಗೆ ಎಂಬುದನ್ನು, ಮೂರು ಲೇಖನಗಳು ಸಂಶೋಧನೆಯ ತಾತ್ವಿಕತೆಯನ್ನು ಅನುಸಂಧಾನಗೊಳಿಸುವ ವಿಧಾನ ಯಾವುದಾಗಿರಬೇಕು ಎಂಬುದನ್ನು ಹೇಳಿದೆ ಎಂದರು. ಇಂದಿನ ಸಾಂಸ್ಕೃತಿಕ ಜಗತ್ತಿನೊಳಗಡೆ ಸಂಶೋಧನೆ ನಡೆಸುವ ದೊಡ್ಡ ಸವಾಲು ನಮ್ಮ ಮುಂದಿದೆ. ಏಕರೂಪಿ ಆರೋಪದ ಎದುರು ಬಹುರೂಪಿ ಪಠ್ಯಗಳನ್ನು ಜನರ ಎದುರಿಗಿಡಬೇಕಿದೆ. ನಾಡಿನ ಬಹುತ್ವವೇ ನಮ್ಮ ಶಕ್ತಿ ಎಂಬುದನ್ನು ಸಾಬೀತುಪಡಿಸುವಂತಹ ಅಧ್ಯಯನದ ವಿಧಾನಗಳನ್ನು ನಾವು ತೋರಿಸಬೇಕಿದೆ. ಇಂತಹ ದೃಷ್ಟಿಕೋನಕ್ಕೆ ಈ ಕೃತಿ ಬಹುದೊಡ್ಡ ದಾರಿ ತೆರೆಯಲಿದೆ. ಮಾರ್ಗದರ್ಶಕ ಪ್ರಬಂಧವಾಗಿ ಹಾಗೂ ಸಮುದಾಯದ ಅಧ್ಯಯನಕ್ಕೆ ಈ ಕೃತಿ ಮಹತ್ವವಾಗಿದೆ? ಎಂದರು. ಹಿರಿಯ ವಿದ್ವಾಂಸರಾದ ಪ್ರೊ ಆರ್.ವಿ.ಎಸ್. ಸುಂದರಂ ಅವರು ಪುಸ್ತಕ ಬಿಡುಗಡೆ ಮಾಡಿ– 'ಈ ಬಗೆಯ ಅಧ್ಯಯನಗಳು ಕಡಿಮೆ ಆಗುತ್ತಿರುವ ಸಂದರ್ಭದಲ್ಲಿ ಬಿಳಿಮಲೆಯವರ ಪುಸ್ತಕಕ್ಕೆ ವಿಶೇಷ ಮಹತ್ವ ಇದೆ' ಎಂದು ಶ್ಲಾಘಿಸಿದರು.

ಲೇಖಕ ಪ್ರೊ. ಸಣ್ಣರಾಮ ಅಧ್ಯಕ್ಷತೆ ವಹಿಸಿ, 'ಕನ್ನಡದ ಪರಿಧಿಯಲ್ಲಿ ಸಮಗ್ರ ಭಾರತವನ್ನು ನೋಡುವ ಪ್ರಯತ್ನ ಈ ಕೃತಿಯಲ್ಲಿದೆ. ತಮ್ಮ ಅರಿವಿನ ಪರಿಧಿಯನ್ನು ಈ ಕೃತಿ ವಿಸ್ತರಿಸಿದೆ' ಎಂದರು. ಪತ್ರಕರ್ತ ದಿನೇಶ್ ಅಮೀನ್‌ಮಟ್ಟು, 'ರಾಮಾಯಣ, ಮಹಾಭಾರತಗಳಿಗೆ ವಿಶ್ರಾಂತಿ ನೀಡಿ, ನಮ್ಮ ಜನಪದ, ಜನಪದ ಕಲೆ, ಕಾವ್ಯಗಳನ್ನು ಉಳಿಸಿಕೊಳ್ಳಬೇಕಿದೆ' ಎಂದರು.

ಲೇಖಕ ಪುರುಷೋತ್ತಮ ಬಿಳಿಮಲೆ ಅವರು ಮಾತಾಡಿ '1971 ರಿಂದ 2011ರ

**ಪ್ರೊ. ಪುರುಷೋತ್ತಮ ಬಿಳಿಮಲೆ ಅವರ ಏಳು ಪ್ರಬಂಧಗಳ ಈ ಸಂಕಲನ ಕನ್ನಡ ವಿಚಾರಧಾರೆಯ ಬಹುತ್ವವನ್ನು ಪ್ರತಿಬಿಂಬಿಸುವುದು ಮಾತ್ರವಲ್ಲದೆ; ಕನ್ನಡ ಸಂಶೋಧನೆ ಹಿಡಿಯ ಬೇಕಿರುವ ಹೊಸಹಾದಿಗಳನ್ನು ಗುರುತಿಸಿಕೊಟ್ಟಿರುವದು. ಇಲ್ಲಿ ಬದಲಾಗುತ್ತಿರುವ ಕಥನಗಳನ್ನಲ್ಲದೆ ಭಾರತದ ದಶದಿಕ್ಕುಗಳ ಕಥನಗಳನ್ನು ಚರ್ಚಿಸಲಾಗಿದೆ. ಬಿಳಿಮಲೆಯವರ ಆಳವಾದ ಚಿಂತನೆಯ ಈ ಬರಹಗಳನ್ನು ಕನ್ನಡಿಗರೆಲ್ಲರು ಸ್ವಾಗತಿಸುವರೆಂಬ ಭರವಸೆ ನನ್ನದಾಗಿದೆ.**

**ಪ್ರೊ. ಷ. ಶೆಟ್ಟರ್**
**ಇತಿಹಾಸ ತಜ್ಞರು, ಬೆಂಗಳೂರು**

**ಪುರುಷೋತ್ತಮ ಬಿಳಿಮಲೆಯವರ 'ಕನ್ನಡ ಕಥನಗಳು' ಕೃತಿ ಕನ್ನಡ ಸಾಹಿತ್ಯ ಮತ್ತು ಜನಪದಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಸಾಂಸ್ಕೃತಿಕ ಅಸ್ಮಿತೆ ರೂಪುಗೊಳ್ಳುತ್ತಿರುವ ಬಗೆಯನ್ನು ನಾನಾ ರೀತಿಯಲ್ಲಿ ಶೋಧಿಸುತ್ತದೆ. ಸಾಂಸ್ಕೃತಿಕ ಸಂಕಥನಗಳು ಗತ, ವರ್ತಮಾನ ಮತ್ತು ಭವಿಷ್ಯತ್ತಿನ ಕಥನಗಳನ್ನು ನಿರೂಪಿಸುತ್ತವೆ. ಸಾಹಿತ್ಯಿಕ ಅಧ್ಯಯನಗಳು ಸಾಂಸ್ಕೃತಿಕ ಮತ್ತು ಚಾರಿತ್ರಿಕ ಅಧ್ಯಯನಗಳೊಂದಿಗೆ ತಳಕು ಹಾಕಿಕೊಂಡಿದ್ದು ಇವು ಸಾಂಸ್ಕೃತಿಕ ಮತ್ತು ಚಾರಿತ್ರಿಕ ಪರಿಭಾಷೆಯಲ್ಲಿ ವ್ಯಕ್ತವಾಗುತ್ತವೆ. ಸಂಕಥನ ಎಂದರೆ ನೈಜ ಅಥವಾ ಕಲ್ಪಿಸಿಕೊಂಡ ಕಥೆಗಳನ್ನು ಹೇಳುವುದಾಗಿದೆ. ಪ್ರೊ. ಪುರುಷೋತ್ತಮ ಬಿಳಿಮಲೆಯವರ ಕಥನಗಳು ಕನ್ನಡದ ಪರ್ಯಾಯ ಸಂಸ್ಕೃತಿಗಳನ್ನು ಅನಾವರಣಗೊಳಿಸುವ ಪ್ರಯತ್ನವಾಗಿದ್ದು, ಇಂಥ ಹೊಸ ವೈಧಾನಿಕತೆಯ ಮೂಲಕ ಅವರು ಕನ್ನಡದ ಸಾಹಿತ್ಯಿಕ ಅಧ್ಯಯನಕ್ಕೆ ಹೊಸ ಆಯಾಮ ನೀಡಿದ್ದಾರೆ.**

**ಪ್ರೊ. ಅಜಿತ್ ಖನ್ನ,**
**ಫ್ರೆಂಚ್ ವಿದ್ವಾಂಸರು, ಜೆ.ಎನ್.ಯು.**


ನಡುವಿನ ಅವಧಿಯಲ್ಲಿ ಶೇ 43.5ರಷ್ಟು ಹಿಂದಿ ಮಾತನಾಡುವವರ ಸಂಖ್ಯೆ ಜಾಸ್ತಿಯಾಗಿದೆ. ಬಾಂಗ್ಲಾ ಭಾಷೆ ಶೇ 14, ತೆಲುಗು ಶೇ 11, ತಮಿಳು ಶೇ 9, ತುಳು ಶೇ 7 ರಷ್ಟಿದೆ. ಆದರೆ ಕನ್ನಡವು ಭಾರತ ಭಾಷೆಗಳಲ್ಲಿಯೇ ಅತ್ಯಂತ ಕಡಿಮೆ ಶೇ 3.25ರಷ್ಟು ಮಾತ್ರ ಪ್ರಗತಿಯನ್ನು ದಾಖಲಿಸಿದೆ. ಇದೇ ವೇಗದಲ್ಲಿ ಕನ್ನಡ ಸಾಗಿದರೆ ಮುಂದಿನ 30 ವರ್ಷಗಳಲ್ಲಿ ಕನ್ನಡ ಬೆಳವಣಿಗೆ ತನ್ನ ಚಲನಶೀಲತೆಯನ್ನು ಕಳೆದುಕೊಳ್ಳುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಕನ್ನಡವಿದ್ದು, ಇದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕಿದೆ. ಹೊಸ ತಲೆಮಾರು ಗಂಭೀರವಾದ ಚರ್ಚೆ, ಸಂಶೋಧನೆ ಕೈಗೊಳ್ಳಬೇಕಿದೆ' ಎಂದು ಮನವಿ ಮಾಡಿದರು.

**ಕೃಷ್ಣಮೂರ್ತಿ**

# ಲೇಖಕರ ಸ್ವಗತದಿಂದ


**1979**ರಿಂದ ನಾನು ಅಧ್ಯಾಪಕನಾಗಿ ದುಡಿಯುತ್ತಿದ್ದೇನೆ. ಕಳೆದ 40 ವರ್ಷಗಳಲ್ಲಿ ಜಗತ್ತು ತೀವ್ರವಾಗಿ ಬದಲಾಗುತ್ತಿರುವುದಕ್ಕೆ ಸಾಕ್ಷಿಯಾಗುತ್ತಿದ್ದೇನೆ. ಈ ಬದಲಾಗುತ್ತಿರುವ ವಿಶ್ವದ ಪರಿಕಲ್ಪನೆಗೆ ಸರಿಯಾಗಿ ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಆಲೋಚನೆ ಬರುವಂತೆ ಕೆಲಸ ಮಾಡಬೇಕು ಎಂಬುದು ನನ್ನ ನಂಬಿಕೆ. ಭಾಷೆಯ ಮೇಲೆ ವಿದ್ಯಾರ್ಥಿಗಳಿಗೆ ಹಿಡಿತ ಬರಬೇಕು ಮತ್ತು ಅವರ ಯೋಚನಾ ಶಕ್ತಿ ತೀಕ್ಷ್ಣಗೊಳ್ಳಬೇಕು ಎಂಬುದು ನನ್ನ ಕನಸು. ಪಂಪನನ್ನು ಓದುವುದು ಎಂದರೆ, ವಿಕ್ರಮಾರ್ಜುನ ವಿಜಯವನ್ನು ಹಾಗೂ ಆದಿ ಪುರಾಣವನ್ನು ಅದೆಷ್ಟೇ ಕಷ್ಟವಾದರೂ ಮೂಲದಲ್ಲಿಯೇ ಓದುವುದು. ಆನಂತರ ಪಂಪನ ಬಗ್ಗೆ ಪ್ರಕಟವಾದ ಹತ್ತಾರು ಪುಸ್ತಕಗಳನ್ನೂ, ನೂರಾರು ಲೇಖನಗಳನ್ನೂ ಸಂಗ್ರಹಿಸಿ ಅವುಗಳನ್ನು ಅಧ್ಯಯನ ಮಾಡುವುದು, ವಿದ್ವಾಂಸರೊಡನೆ ಅವುಗಳ ಬಗ್ಗೆ ಚರ್ಚಿಸುವುದು ಮತ್ತು ಕೊನೆಯಲ್ಲಿ ಪಂಪನ ಬಗ್ಗೆ ತಾನು ಬದುಕುತ್ತಿರುವ ಕಾಲದ ಅಗತ್ಯಗಳಿಗನುಗುಣವಾಗಿ ತನ್ನದೇ ಆದ ಸ್ವಂತ ತೀರ್ಮಾನವೊಂದನ್ನು ತೆಗೆದುಕೊಂಡು ಲೇಖನವೊಂದನ್ನು ಬರೆಯುವುದು ಅಥವಾ ಮುಂದಕ್ಕೆ ಸಾಗುವುದು. ಈ ಅರ್ಥದಲ್ಲಿ ಸಾಹಿತ್ಯ ಕೃತಿಗಳ ಅಧ್ಯಯನವು ಯಾವತ್ತೂ ಓದುವ, ಆಲೋಚಿಸುವ, ಚರ್ಚಿಸುವ ಮತ್ತು ಸಂಭ್ರಮಿಸುವ ಕೆಲಸ.

ಆದರೆ ಈಗ ಕಾಲ ಬದಲಾಗಿದೆ. ಅದೊಂದು ಸಹಜ ಪ್ರಕ್ರಿಯೆ. ಬದಲಾದ ಕಾಲಘಟ್ಟದಲ್ಲಿ ತಂತ್ರಜ್ಞಾನವು ಮೇಲ್ಮೈ ಸಾಧಿಸಿ ಓದುವ ಸಂಭ್ರಮವನ್ನು ಕಡಿಮೆ ಮಾಡಿದೆ. ವಿದ್ಯಾರ್ಥಿಗಳು ಮೂಲ ಪಠ್ಯಗಳನ್ನು ಓದದೆ ಗೈಡ್‌ಗಳನ್ನು ಆಶ್ರಯಿಸುತ್ತಿದ್ದಾರೆ. ವಿಶ್ವವಿದ್ಯಾಲಯಗಳು ನಡೆಸುವ ಪ್ರವೇಶ ಪರೀಕ್ಷೆಗಳಲ್ಲಿ ಭಾಷೆ ಮತ್ತು ವಿವೇಚನಾಶೀಲತೆಯನ್ನು ಪರೀಕ್ಷಿಸಲು ಅವಕಾಶವೇ ಇಲ್ಲವಾಗಿದೆ. ಗಣಿತದ ವಸ್ತುನಿಷ್ಠತೆಯು ಭಾಷೆಯ ಜೀವಂತಿಕೆಯನ್ನು ತಿಂದು ಹಾಕಿದೆ. ಕುಮಾರವ್ಯಾಸನ ಕಾಲ ಯಾವುದು ಎಂದು ಕೇಳಿ, ಮೂರು ಉತ್ತರ ಕೊಟ್ಟು ಒಂದನ್ನು ಗುರುತಿಸಲು ಹೇಳಿದರೆ, ವಿದ್ಯಾರ್ಥಿಯು ಕುಮಾರವ್ಯಾಸನ ಬಗೆಗೆ ಏನು ಹೇಳಿದಂತಾಯಿತು? ಸರಿ ಅಥವಾ ತಪ್ಪುಗಳಿಗೆ ಸಾಹಿತ್ಯ ಹಾಗೂ ತತ್ವ ಶಾಸ್ತ್ರಗಳ ಕ್ಷೇತ್ರದಲ್ಲಿ ಯಾವ ಮನ್ನಣೆಯೂ ಇಲ್ಲ. ಸೀತೆಯನ್ನು ಕಂಡು ಆಕೆಯ ಚೆಲುವಿಗೆ ಮನಸೋತ ರಾವಣನ್ನು ಕುರಿತು ನಾಗಚಂದ್ರನು 'ಅಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ' ಎಂದು ಉದ್ಧರಿಸುತ್ತಾನೆ. ಅಷ್ಟಾವಂಕ ಕೊಳಕ ಎಂದು ದೂತಿ ಹೇಳುವಾಗ ಜನ್ನನ ಅಮೃತಮತಿಯು– 'ಕರಿದಾದೊಡೆ ಕತ್ತುರಿಯಂ. ಮುರುಡಾದೊಡೆ ಮಲಯಜಂಗಳಂ ಕೊಂಕಿದೊಡೇಂ ಸ್ವರಚಾಪಮನಿಳಿಕಯ್ವರೆ, ಮರುಳೇ ಪೊಲ್ಲಮೆಯೆ ಲೇಸು ನಲ್ಲರ ಮೈಯೊಳ್.' ಎಂದು ಪಿಸುಗುಟ್ಟುತ್ತಾಳೆ. ಈಗಿನ ದಿನಗಳಲ್ಲಿ ಒಳ್ಳೆಯ ಪುಸ್ತಕಗಳನ್ನು ಓದಬೇಕಾಗಿಲ್ಲ, ಬರೆಯುವ ಅಗತ್ಯವೂ ಇಲ್ಲವೆಂಬಂತೆ ಸಾರ್ವಜನಿಕಾಭಿಪ್ರಾಯಗಳನ್ನೂ ಮೂಡಿಸಲಾಗುತ್ತಿದೆ. ವ್ಯಾಸ, ವಾಲ್ಮೀಕಿ, ಕಾಳಿದಾಸ, ಬಾಣ, ಅಶ್ವಘೋಷ, ಪಂಪ, ಬಸವಣ್ಣ, ಅಕ್ಕ, ಕುವೆಂಪು, ಮಾಸ್ತಿ, ಕಾರಂತ, ಬೇಂದ್ರೆಯವರು ಬರೆದ ನಾಡಲ್ಲಿ ಇಂದು ಲೇಖಕರು ಹಾಸ್ಯಕ್ಕೆ ವಸ್ತುವಾಗುತ್ತಿದ್ದಾರೆ. ಹೀಗೆ ಭಾಷೆ ಮತ್ತು ತತ್ವ ಶಾಸ್ತ್ರಗಳು ಪತನಮುಖಿಯಾಗುತ್ತಿರುವ ಹೊತ್ತು ಈ ಪುಸ್ತಕ ಪ್ರಕಟವಾಗುತ್ತಿದೆ. ಏನಿಲ್ಲವೆಂದರೂ ಈ ಕೆಲಸ ನನಗೆ ಓದುವ ಮತ್ತು ಬರೆಯುವ ಸಂತಸವನ್ನು ಕೊಟ್ಟಿದೆ.




ಕೃತಿಯ ಮುಖಪುಟ

# ಕನ್ನಡದ ಸರ್ವಕಾಲೀನ ಶ್ರೇಷ್ಠ ಕಾದಂಬರಿ 'ಅಳಿದ ಮೇಲೆ'




**ಡಾ. ಶಿವರಾಮ ಕಾರಂತರ ಮಹತ್ವದ ಕಾದಂಬರಿ 'ಅಳಿದ ಮೇಲೆ' ಕೃತಿಯನ್ನು ಈಚೆಗೆ ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠ ಇಂಗ್ಲೀಷ್ ಭಾಷೆಯಲ್ಲಿ ಪ್ರಕಟಿಸಿ ಹೊರತಂದಿದೆ. ಈ ಕೃತಿಯನ್ನು ಅನುವಾದಿಸಿದ ಲೇಖಕ ಪ್ರೊ. ಪ್ರಮೋದ ಮುತಾಲಿಕ್ ಅವರು ಕೃತಿಯ ವಿಶಿಷ್ಟತೆಯ ಕುರಿತು ಬರೆದ ವಿಶೇಷ ಲೇಖನ ಇಲ್ಲಿದೆ. ಪ್ರೊ. ಮುತಾಲಿಕ್ ಅವರು ಬೆಂಗಳೂರಿನ ನ್ಯಾಶನಲ್ ಕಾಲೇಜಿನ ವಿಶ್ರಾಂತ ಇಂಗ್ಲೀಷ್ ಪ್ರಾಧ್ಯಾಪಕರು.**

**-ಸಂಪಾದಕ**

ಶಿವರಾಮ ಕಾರಂತರ 'ಅಳಿದ ಮೇಲೆ' ಪ್ರಕಟವಾದದ್ದು 1960ರಲ್ಲಿ. ಅವರ ಕಾದಂಬರಿ ಸೃಷ್ಟಿ ಉತ್ತುಂಗ ಸ್ಥಿತಿಯಲ್ಲಿದ್ದಾಗ ಬರೆದದ್ದು. 1924 ರಿಂದ 1986ರವರೆಗೆ ಒಟ್ಟು 44 ಕಾದಂಬರಿಗಳನ್ನು ಬರೆದ ಕಾರಂತರು ಮೊದಲು ಪತ್ತೇದಾರಿ ಕಾದಂಬರಿಗಳನ್ನು ಬರೆದರೆಂಬುದು ಅಷ್ಟೇ ಸೋಜಿಗದ ಸಂಗತಿ. ಹಾಗೆ ನೋಡಿದರೆ 1933ರಲ್ಲಿ ಬಂದ 'ಚೋಮನದುಡಿ' ಅವರ ಪ್ರಮುಖ ಕಾದಂಬರಿ. ಮುಂದಿನ ಅವರ ಒಟ್ಟಾರೆ ಸಾಹಿತ್ಯ ಸೃಷ್ಟಿ ಅವರನ್ನು ವಿಶ್ವದರ್ಜೆಯ ಲೇಖಕನನ್ನಾಗಿಸಿದೆ. ಅವರ ಕಾದಂಬರಿಗಳು ಸಮೃದ್ಧ ಬದುಕಿನ ವಿವಿಧ ಆಯಾಮಗಳನ್ನು ತಾವು ಕಂಡಂತೆ, ಅನುಭವಿಸಿದಂತೆ ನಮ್ಮ ಮುಂದೆ ತೆರೆದಿಡುವುದರಿಂದ, ತೀರ authentic ಆದಂತಹ ಲೋಕವೊಂದರ ಸೃಷ್ಟಿ ಪ್ರತಿ ಕಾದಂಬರಿಯಲ್ಲೂ ಆಗುವುದು. ಓದುಗನಲ್ಲಿ ಅಚ್ಚಳಿಯದ ಮುದ್ರೆಯೊಂದನ್ನು ಒತ್ತಿ ಬಿಡುವುದು.

'ಅಳಿದ ಮೇಲೆ' ಇಂಥ ಒಂದು ಕೃತಿ. ಕನ್ನಡದ ಶ್ರೇಷ್ಠ ಕಾದಂಬರಿಗಳಲ್ಲಿ ಒಂದು. ಸರ್ವಕಾಲೀನ ಶ್ರೇಷ್ಠ ಕಾದಂಬರಿ ಎಂದರೂ ಉತ್ಪ್ರೇಕ್ಷೆ ಆಗಲಾರದು. ಸಾರ್ಥಕ ಬದುಕನ್ನು ಸಾಂಕೇತಿಕವಾಗಿ ಸೂಚಿಸಿರುವ ಈ ಕಾದಂಬರಿ ನನಗೆ ನನ್ನ ಶಾಲಾ ದಿನಗಳಿಂದಲೂ ತುಂಬ ಪ್ರಿಯವಾದದ್ದು. ಓದುವ ವಿವಿಧ ಹಂತಗಳಲ್ಲಿ ನಾನು ಕೆಲಸಲ ನಿರೂಪಕ (ಕಾರಂತ) ಮತ್ತು ಕೆಲಸಲ ಯಶವಂತರಾಯನಾಗಿ ಸಂಭ್ರಮಿಸಿದ್ದೂ ಉಂಟು. ಒಂದು ಸಾಹಿತ್ಯ ಕೃತಿಯ ಪಾತ್ರಗಳೇ ನಾವಾಗುವಷ್ಟು ತಾದಾತ್ಮತೆ ಸೃಷ್ಟಿಯಾದಾಗ ಆ ಕೃತಿಯು ನಿಜವಾಗಿ ನಮ್ಮನ್ನು ತಟ್ಟುವದು ಮತ್ತು ಈ ತಟ್ಟುವಿಕೆ ಕೃತಿಯನ್ನು ತೀರ ಹತ್ತಿರವಾಗಿಸುವುದು. ಸುಮಾರು ನಾಲ್ಕು ದಶಕಗಳಿಗೂ ಮಿಕ್ಕಿ ನನ್ನನ್ನು ಗಾಢವಾಗಿ ಪ್ರಭಾವಿಸಿದ ಕೃತಿ ಇದು. ನನ್ನ ಬದುಕಿನ ವಿವಿಧ ಹಂತಗಳಲ್ಲಿ ಅಷ್ಟೇ authentic ಆಗಿ ತಲುಪಿದೆ.


ವಸ್ತು ಮತ್ತು ತಂತ್ರ ನಾವೀನ್ಯತೆಯಿಂದ ಥಟ್ಟನೆ 'ಅಳಿದ ಮೇಲೆ' ನನಗೆ ಪ್ರಿಯವಾಯ್ತು. ಪಯಣ ಮತ್ತು ಅನ್ವೇಷಣೆ ನಮ್ಮೆಲ್ಲರ ಬದುಕಿನ ಚಿರವಾಸ್ತವ ಸತ್ಯಗಳು. ಹಾಗೆ ನೋಡಿದರೆ ಇವೆರಡು ಈ ಕಾದಂಬರಿಯ ಮೂಲದ್ರವ್ಯಗಳು. ಯಾವುದೇ ಬದುಕಿನ ತರಹ ಸಾವೂ ನಿರರ್ಥಕವಾದುದಲ್ಲ. ಎಲ್ಲ ಜೀವಗಳಿಗೂ ಅವುಗಳದ್ದೇ ಆದ ಅರ್ಥವಂತಿಕೆ ಇದೆ, ತೂಕವಿದೆ. ಈ ಒಂದು ಪ್ರಕ್ರಿಯೆಯ ಸಾರ್ಥಕತೆಯ ಹುಡುಕಾಟ ಈ ಕಾದಂಬರಿಯಲ್ಲಿದೆ. ವ್ಯಕ್ತಿಯೊಬ್ಬನ ಬದುಕಿನ ಸಾರ್ಥಕ್ಯವನ್ನು ಆತನ ಸಾವಿನ ನಂತರ ಅರಸುವ ಪ್ರಯತ್ನ ಇಲ್ಲಿದೆ. ಕಾರಂತರ ಮುನ್ನುಡಿಯಲ್ಲಿ ಹೇಳುವಂತೆ 'ಮಾನವನ ಬದುಕಿನಲ್ಲಿ ಉಳಿಯುವುದೇನೆಂಬ ಹುಡುಕುವ ಪ್ರಯತ್ನದ ಕಣ್ಣಿದೆ. ಬರಿಯ ಸ್ಮರಣೆಗಳಷ್ಟೆ ಆ ಮೇಲೆ ಉಳಿಯುವ ವಸ್ತುಗಳು. ನಡೆದು ದಾರಿ ಸಾಗಿದವನು ತನ್ನ ಹೆಜ್ಜೆಯ ಜಾಡನ್ನು ಬಿಟ್ಟು ಹೋಗುವಂತೆ, ಕಳೆದ ಬಾಳು ಅನ್ಯರಲ್ಲಿ ಮೂಡಿಸಿದ ಪ್ರಭಾವಗಳಿಂದ ಅಳೆಯಬಹುದಾದ ವಸ್ತುಗಳು– ನಮ್ಮ ಬಾಳು ಇದಕ್ಕಿಂತ ಹೆಚ್ಚಿನ ಪ್ರಭಾವವನ್ನು / ಮುದ್ರೆಯನ್ನು ಒತ್ತಬಹುದೆಂಬುದನ್ನೂ ನಡೆದ ಎಲ್ಲರೂ ಎಣಿಸಬೇಕಿಲ್ಲ. ಮತ್ತು ಈ ಲಭ್ಯತೆ ಎಲ್ಲರಿಗೂ ಸಿಗಲಾರದು. ಕಾದಂಬರಿಯ ಯಶವಂತರಾಯರಂತೆ ಜನ ಹುಟ್ಟುತ್ತಾರೆ, ಬಾಳುತ್ತಾರೆ. ಸಾಯುತ್ತಾರೆ. ಹಲವಾರು ಜನರ ಸಂಪರ್ಕಕ್ಕೂ ಬರುತ್ತಾರೆ. ಈ ಸಂಪರ್ಕದಲ್ಲುಂಟಾದ ಹಿತಾಹಿತ ಪ್ರಭಾವಗಳನ್ನು ಮೇಳವಿಸಿ, ಯಶವಂತರಾಯರ ಬದುಕು ಎಂಥದಿತ್ತು ಎಂದು ಹುಡುಕಲೆತ್ನಿಸಿದ್ದೇನೆ. (ಮುನ್ನುಡಿಯಿಂದ)

ಹೀಗೆ ನಿರ್ದಿಷ್ಟ ಪಾತ್ರವೊಂದರ ಕಳೆದ ಬದುಕಿನ ಎಳೆಗಳನ್ನು ಮತ್ತೆ ಜೋಡಿಸುವ 'ಸಾಧನ'ವಾಗಿ, ಕಾರಂತರು ಬರಹ ರೂಪವೊಂದನ್ನು ಅಭಿವ್ಯಕ್ತಿಯ ಮಾಧ್ಯಮವಾಗಿ ಬಳಸುವದು ತುಂಬ ಗಮನಾರ್ಹ ಎನಿಸುವುದು. ಇದು ಕಾಲಗತಿಯ ಹಿನ್ನೋಟವಾಗಿಯೂ, ನೆನಪಿನಂಗಳದ ಉದ್ದಗಲಗಳ ಅಳೆದಾಟ ಮತ್ತು ಅಲೆದಾಟವಾಗಿ ಪ್ರಸ್ತುತವಾಗಿ ಬಿಡುವದು. ಕಾರಂತರು ಇಂಥ ಒಂದು ಪ್ರಯತ್ನವನ್ನು 'ಬೆಟ್ಟದ ಜೀವ'ದಲ್ಲಿಯೂ ಮಾಡಿದ್ದರು. ಅವರೇ ಹೇಳುವಂತೆ 'ಅದೊಂದು ತರ, ಇದೊಂದು ತರ, ಅದು ಬದುಕಿದ್ದಾಗ ಅರಸಿದ್ದು, ಇದು ಸಾವಿನ ನಂತರ ಅರಸಿದ್ದು'.

ಎಂತಲೆ 'ಅಳಿದಮೇಲೆ'ಯ ಕಥಾನಕ ಆರಂಭವಾಗುವಾಗಲೆ ಕೇಂದ್ರ ವ್ಯಕ್ತಿ ಯಶವಂತರಾಯ ತೀರಿ ಹೋಗಿದ್ದಾನೆ– ಇನ್ನು ಮುಕ್ತಾಯ ಕಾಣುವದು ಅವರ ದಿನಚರಿಯ ಪ್ರತಿ ಪುಟದಲ್ಲೂ ಹೊಸಗುಟ್ಟು ಪಡೆಯುವ ಅವರ ನೆನಪುಗಳೊಂದಿಗೆ. ಹಾಗೆ ನೋಡಿದರೆ ಇದು ವಿಲೋಮಕ್ರಮವೇನೂ ಅಲ್ಲ. ವಾಸ್ತವವಾಗಿ ಒಬ್ಬ ವ್ಯಕ್ತಿ ಏನಾಗಿದ್ದ, ಹೇಗಿದ್ದ–ಇತ್ಯಾದಿ ವಿಚಾರಗಳು ತೀರಾ ಸಮರ್ಪಕವಾಗಿ ಆಕೃತಿಯನ್ನು ಪಡೆಯುವದು ಅವನ ಮರಣಾನಂತರವೆ. ತಾನು ಬದುಕಿದ ಬದುಕಿನಿಂದ ಯಾರಿಗೆ ಪ್ರಯೋಜನವಾಯಿತು ಎಂಬುದು ಯಶವಂತರಾಯರ ಪ್ರಮುಖ ತೊಳಲಾಟವಾಗಿತ್ತು. ಈ ತೊಳಲಾಟಕ್ಕೆ ಉತ್ತರವಾಗಿ ನಿರೂಪಕ ಕಾರಂತರು ಸಿಗುತ್ತಾರೆ. 'ನನ್ನದು ನಿರೀಕ್ಷಕನ ಪಾತ್ರ' ಎಂದು ಅವರೇ ಹೇಳಿಕೊಂಡಿದ್ದರೂ, ಅದು ಅಲ್ಲಿಗೇ ಸೀಮಿತವಾಗದಿರುವದು ಕಾದಂಬರಿಯ ಹೆಗ್ಗಳಿಕೆಗಳಲ್ಲಿ ಒಂದು ಎಂದು ನಾನಂದುಕೊಂಡಿದ್ದೇನೆ.

ಕಾದಂಬರಿಯ ಕೇಂದ್ರವ್ಯಕ್ತಿಯಾದ ಯಶವಂತರಾಯರು ಅತಿಮಾನುಷ ವ್ಯಕ್ತಿಯಲ್ಲ. ತೀರಾ ಸಾಮಾನ್ಯವಾದ ಹಿನ್ನೆಲೆಯಲ್ಲಿಯೆ ಹುಟ್ಟಿ, ಬೆಳೆದು ಬದುಕಿನ ಎಲ್ಲ ಕಷ್ಟ ಕಾರ್ಪಣ್ಯಗಳನ್ನೂ ಅನುಭವಿಸಿ ಅದರಲ್ಲೇ ಮಾಗಿದವರು. ಮಾಗುವಿಕೆ 'ಶೇಕ್ಸಪಿಯರನ ನಾಟಕಗಳಂತೆ ಇಲ್ಲಿಯೂ ಒಂದು ಪ್ರಮುಖವಾದ ಕ್ರಿಯೆ ಆಗಿ ಬಿಡುವದು. Ripness is All ಎಂದು ಶೇಕ್ಷಪಿಯರ್ King Lear ನಲ್ಲಿ ಹೇಳುವ ಉಕ್ತಿಗೆ

**ಆತ್ಮಕಥನದ ಮಾದರಿಯಲ್ಲಿರುವ ದಿನಚರಿಯ ಪುಟಗಳಲ್ಲಿ ಕೆಲ ಚಿತ್ರಗಳು ಯಶವಂತರಾಯರ ಇಡೀ ಬಾಳಿನ ಸಾರವನ್ನು ತಿಳಿಸಿ ಹೇಳುತ್ತವೆ. ಬದುಕಿನ ಋಣದ ವಿವಿಧ ಆಯಾಮಗಳನ್ನು ಅವುಗಳಿಗೆಲ್ಲ ಅವರು ಸ್ಪಂದಿಸಿದ ಪರಿಯನ್ನು ಪರಿಚಯಿಸುತ್ತ, ವಿವೇಕಿಸುತ್ತ ಹೋಗುವ ಈ ಕೃತಿ, ವ್ಯಕ್ತಿಯ ಶರೀರವು ಅಳಿದ ಮೇಲೆ ಉಳಿಯುವುದು ಏನು ಎಂಬುದನ್ನು ಬಿಡಿಸುವ ಕ್ರಮವೇ ಅನನ್ಯವಾದದ್ದು.**



ಡಾ. ಶಿವರಾಮ ಕಾರಂತ

ಯಶವಂತರಾಯರು ನಿದರ್ಶನವಾಗಿ ಬಿಡುತ್ತಾರೆ. ಆಯರ ದೊರೆಗೂ ಯಶವಂತರಾಯರಿಗೂ ಇರುವ ಸಾಮ್ಯತೆಯ ಬಗೆಗಿನ ಯೋಚನೆ ಅಪ್ರಸ್ತುತ ಎನಿಸಲಾರದು. ಎರಡು ಕೃತಿಗಳಲ್ಲಿ ಮಕ್ಕಳು ಮಕ್ಕಳೆ. ಆಯರ ದೊರೆಗೆ ತನ್ನ ಮಕ್ಕಳಿಂದಾದ ಆಘಾತವನ್ನು ತಡೆಯಲಾಗದೆ ಮಾನಸಿಕ ಸ್ತಿಮಿತ ಕಳೆದುಕೊಳ್ಳುತ್ತಾನೆ. ಆದರೆ ಯಶವಂತರಾಯರು ಅದೆಲ್ಲವನ್ನೂ ನುಂಗಿ ಪಕ್ಕಕ್ಕಿಟ್ಟು ಒಂದರ್ಥದಲ್ಲಿ discount ಮಾಡಿ, ದೂರ ಸರಿಯುತ್ತಾರೆ. ಒಂದರ್ಥದಲ್ಲಿ ಹೊಸದಾಗಿ ಬದುಕಲು ಆರಂಭಿಸುವರು ದೂರದ ಮುಂಬೈಯಲ್ಲಿ. ಅಲ್ಲಿಯ ಅನುಭವಗಳೂ ಅವರನ್ನಿನ್ನೂ ಗಟ್ಟಿಯಾಗಿಸುವವು. ಬದುಕಿನ ದೃಷ್ಟಿಕೋನ ಇನ್ನೂ ವಿಶಾಲವಾಗುವುದು. ಬದುಕಿನ ಅವರ ಅನುಭವಗಳು ಅವರಲ್ಲಿ ಯಾವುದೇ ತರಹದ ಕಹಿಯನ್ನು ಹುಟ್ಟಿಸಿ cynicism ನತ್ತ ಎಳೆಯಲ್ಲ. 'ಸ್ವೀಕರಣೆ' ಅವರ ಬದುಕಿನ ಹೊಸ ಮಂತ್ರವಾಗಿ ಬಿಡುವುದು. ಇನ್ನೊಬ್ಬರ ದೃಷ್ಟಿಕೋನವನ್ನು ಗೌರವಿಸುವ, ಸಾಧ್ಯವಾದರೆ ಸ್ವೀಕರಿಸುವ ಮಾನಸಿಕ ಸ್ಥಿತಿಗೆ ಅವರು ತಲುಪುವರು. ಇದು ಅವರು ಮಾಗುವ ಹಂತ. ಈ ಹಂತದಲ್ಲಿ ಅವರಿಗೆ ಅಚಾನಕ್ ಆಗಿ ಕಾರಂತರು ಸಿಗುತ್ತಾರೆ. ಅದೂ ಪ್ರವಾಸ ಒಂದರಲ್ಲಿ ಎನ್ನುವುದು ಗಮನಾರ್ಹ. ಯಶವಂತರಾಯರು ತಮ್ಮ ಓಲೆಯಲ್ಲಿ ಬರೆಯುವಂತೆ 'ಆ ಪಯಣದಲ್ಲಿ ನೀವು ನನ್ನ ಜೀವನದ ಪ್ರತೀಕವಾಗಿ ಕಂಡಿರಿ. ಒಂದು ಬಗೆಯ ಭ್ರಾತತ್ವಭಾವ ನಮ್ಮಿಬ್ಬರಲ್ಲಿ ಇರುವಂತೆ ನನಗೆ ಬೋಧೆಯಾಯ್ತು. 'ಈ ಒಂದು ಬೋಧೆ' ಒಂದು ಗಾಢವಾದ ಅರ್ಥಪೂರ್ಣವಾದ ಸಂಬಂಧವಾಗಿ ಬೆಳೆದು ಯಶವಂತರಾಯರ ಬದುಕು–ಸಾವು ಮತ್ತು ಅವರ ಸಾವಿನಾಂತರದ ಬದುಕಿಗೂ ಒಂದು ಕೊಂಡಿಯಾಗಿ ಬಿಡುವದು. ನಿರೂಪಕ ಕಾರಂತ ಯಶವಂತರಾಯರ ಇನ್ನೊಂದು ಮುಖವಾಗಿ ಬಿಡುತ್ತಾರೆ. ಈ ಪ್ರಕ್ರಿಯೆ ಕಾದಂಬರಿಕಾರ ಕಾರಂತರ ಅಪರೂಪದ ಮಾಸ್ಟರ್ ಸ್ಟ್ರೋಕ್, ಸೃಷ್ಟಿಶೀಲತೆಯ ಪರಾಕಾಷ್ಠೆ ಎಂದು ನಾನಂದುಕೊಂಡಿದ್ದೇನೆ. ಈ ಕೊಂಡಿಯೂ ಯಶವಂತರಾಯರ ಬದುಕಿನ ಹಳೆಯ ಹೆಗೆಕೆಗಳನ್ನು ಕ್ರಮಬದ್ಧವಾಗಿ ಜೋಡಿಸುವದು. ಅದಕ್ಕೊಂದು ಕನ್ನಡ ಕಾದಂಬರಿ ಸಂದರ್ಭದಲ್ಲಿ ಅಪರೂಪವಾದ ಬಂಧವನ್ನು ನೀಡುವದು. ಯಶವಂತರಾಯರ 'ಸಹಸ್ರ' ನೆನಪುಗಳಲ್ಲಿ ಅವರೇ ಕೇಳುವಂತೆ 'ಕೆಲವಾದರೂ ಒಳ್ಳೆಯವಿರುವದಿಲ್ಲವೇ? ಅವುಗಳನ್ನು ನಾನು ಯಾರಿಗಾದರೂ ಹೇಳಬೇಡವೇ? ನಿರೂಪಕ ಕಾರಂತ ಇದನ್ನು ಖಂಡಿತವಾಗಿಯೂ ಹೇಳುತ್ತಾರೆ–ತುಂಬ ಧನಾತ್ಮಕವಾಗಿ. ಪ್ರಾಯಶಃ ಈ ಕಾರಣಕ್ಕಾಗಿಯೇ ಅವರಿಗೆ ತಮ್ಮ ವಸ್ತುನಿಷ್ಠತೆಯ ಬಗೆಗೆ ಒಂದೆರಡು ಬಾರಿ ಅನುಮಾನ ಬಂದುದುಂಟು. 'ನಮ್ಮವರು, ನಮಗೆ ಪ್ರಿಯರಾದವರು ಎಂಬ ಮೋಹ ಸ್ವಲ್ಪ ಬಂದರೂ ಕೂಡ, ನಮ್ಮ ವಿವೇಕ, ಸಮತೋಲ–ಎಲ್ಲವೂ ಮರೆಯಾಗುವದೇನೋ.!

ಆತ್ಮಕಥನದ ಮಾದರಿಯಲ್ಲಿರುವ ದಿನಚರಿಯ ಪುಟಗಳಲ್ಲಿ ಕೆಲ ಚಿತ್ರಗಳು ಯಶವಂತರಾಯರ ಇಡೀ ಬಾಳಿನ ಸಾರವನ್ನು ತಿಳಿಸಿ ಹೇಳುತ್ತವೆ. ಬದುಕಿನ ಋಣದ ವಿವಿಧ ಆಯಾಮಗಳನ್ನು ಅವುಗಳಿಗೆಲ್ಲ ಅವರು ಸ್ಪಂದಿಸಿದ ಪರಿಯನ್ನು ಪರಿಚಯಿಸುತ್ತ, ವಿವೇಕಿಸುತ್ತ ಹೋಗುವ ಈ ಕೃತಿ, ವ್ಯಕ್ತಿಯ ಶರೀರವು ಅಳಿದ ಮೇಲೆ ಉಳಿಯುವುದು ಏನು ಎಂಬುದನ್ನು ಬಿಡಿಸುವ ಕ್ರಮವೇ ಅನನ್ಯವಾದದ್ದು. ಯಶವಂತರಾಯರು ಹಿಂದೆ ಬಿಟ್ಟು ಹೋದ ಬರಹ ಆ ಉಳಿಯುವ ಸತ್ವಕ್ಕೆ ಒಂದು ರೂಪಕವಾಗಿ ನಿಲ್ಲುವದು ಯಶವಂತರಾಯರ Conviction ಗಳಿಗೆ ತಾರ್ಕಿಕವಾದ ಅರ್ಥವಂತಿಕೆಯನ್ನು ನೀಡುವ ಪಾತ್ರ ನಿರೂಪಕ ಕಾರಂತರದು–ಒಂದರ್ಥದಲ್ಲಿ ಅವರ alter ego.

ಯಶವಂತರಾಯರ ಬದುಕನ್ನು ರೂಪಿಸಿದ ಅಪರೂಪದ ವ್ಯಕ್ತಿ–ಪಾರ್ವತಮ್ಮ. ಕನ್ನಡ ಕಾದಂಬರಿ ಲೋಕದಲ್ಲಿಯೆ ಅಚ್ಚಳಿಯದೆ ಉಳಿಯುವ ಸೃಷ್ಟಿ. ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ನಿರಪೇಕ್ಷ ಭಾವದಿಂದ ಜೀವಸೆಲೆಯಾಗುವ ಪರಿ ಅನನ್ಯವಾದದ್ದು. ಮಾಗುವಿಕೆಯ ಅನ್ವರ್ಥ ನಾಮ ಪಾರ್ವತಮ್ಮ. ಯಶವಂತರಾಯರ ಬದುಕಲ್ಲಿ ವಿವಿಧ ಹಂತಗಳಲ್ಲಿ ಪೂರಕವಾಗಿ ಬಂದ ವ್ಯಕ್ತಿಗಳನ್ನೆಲ್ಲ ಗಮನಿಸಿದಾಗ ಮನುಷ್ಯ ಸ್ವಭಾವದ ವಿರಾಟದರ್ಶನವಾಗದಿರದು. ಯಾರ ಋಣವನ್ನು ಮರೆಯದೆ ಅದನ್ನು ಸ್ಮರಿಸುತ್ತ, ಸ್ಪಂದಿಸುತ್ತ ಸಾಗಿ ಮಾಗುವ ಯಶವಂತರಾಯರು ನಮ್ಮನ್ನು ಬಹುಕಾಲ ತಟ್ಟದೆ ಇರುವುದಿಲ್ಲ. ತನ್ನ ಅಪೂರ್ಣವಾಗಿರಬಹುದಾದ ಋಣ ಸಂದಾಯವನ್ನು ನಿರೂಪಕ ಕಾರಂತರ ಮೂಲಕ ಮಾಡಿಸುವರು. ಇದು ಬರಿ ಕೊಡು–ತೆಗೆದುಕೊಳ್ಳುವ ಲೆಕ್ಕಾಚಾರದ ಸಂಗತಿಯಲ್ಲ. ತಾನು ಇನ್ನೊಬ್ಬನಾಗಿ ಆತನಿಗೆ ಸ್ಪಂದಿಸುವದು. ವ್ಯಕ್ತಿ ಪರಿಪೂರ್ಣತೆಯೆಡೆಗೆ ಬೆಳೆಯುತ್ತಿರುವ ಸೂಚನೆ. ವೈಯಕ್ತಿಕ ಸಿದ್ಧಾಂತ ನಂಬಿಕೆಗಳನ್ನು ಮಾಡಿದರೂ ಮಾನವೀಯತೆಯನ್ನು ಮೆರೆಯುವುದು. ಈ ಕಾದಂಬರಿ ಎರಡು ಮುಖ್ಯ ಪಾತ್ರಗಳು. ಈ ಹಿನ್ನೆಲೆಯಲ್ಲಿ ಕಾರಂತರ 'ಅಳಿದ ಮೇಲೆ' Liberal humanism ಗೆ ಒಂದು ಜ್ವಲಂತ ಉದಾಹರಣೆ ಎನ್ನುವದು ನನ್ನ ಅನಿಸಿಕೆ. ಈ ಕಾರಣಕ್ಕಾಗಿಯೇ ಈ ಕೃತಿ ಯಾವಾಗಲೂ ನನ್ನನ್ನು haunt ಮಾಡುತ್ತಲೆ ಇದೆ. ನಾನು ಬದುಕುತ್ತಿರುವ ಬದುಕನ್ನು ಸ್ವಲ್ಪ ಆಚೆಗೆ ನಿಂತು ಪರಾಮರ್ಶಿಸಲು ಪ್ರೇರೇಪಿಸುತ್ತಲೇ ಇದೆ. ಈ ಪ್ರಕ್ರಿಯೆ ಸಾಹಿತ್ಯ ಕೃತಿಯೊಂದನ್ನು ಚಿರನೂತನವಾಗಿಸುವುದು. ಪ್ರಾಯಶಃ ಅಳಿದ ಮೇಲೂ ನಾವು ಬದುಕಿರಬಹುದಾದ ಸಾಧ್ಯತೆಯ ಒಂದು ದಿಕ್ಸೂಚಿ!

**ಪ್ರೊ. ಪ್ರಮೋದ ಮುತಾಲಿಕ್**

# ನದಿ ನೀರ ನೆರೆ

ಓ ನನ್ನ ಜೀವನಾಡಿ ನದಿ ನೀರೆ,
ನೀವ್ ಲ್ಲವೇ ನಮ್ಮ ಜೀವನಧಾರೆ,
ನೀನೇಕಾದೇ ಹೀಗೆ ಉಗ್ರ ನೆರೆ,
ಕಿತ್ತು ಕೊಂಡೆ ನಮ್ಮವರ ಆಸರೆ,
ಕಟ್ಟಿ  ಹಾಕಿದೆ ನನ್ನವರ ಉಸಿರೇ,
ಕೇಳಲಿಲ್ಲವೇ ಮೂಖ ಪ್ರಾಣಿಗಳ ಕರೆ,
ಜಲ ಸಮಾಧಿಯಾದವರೆಲ್ಲ ನನ್ನವರೇ
ಓ ನನ್ನ ಜೀವನಾಡಿ ನದಿ ನೀರೆ,
ನೀವ್ ಲ್ಲವೇ ನಮ್ಮ ಜೀವನಧಾರೆ,

ಹೇ ಕೃಷ್ಣೇ, ಕಾವೇರಿ, ತುಂಗೇ,
ಕೈ ಮುಗಿವೆ ಧುಮುಕದಿರೆ,
ಕರುಳ ಕುಡಿಗಳನ್ನು ಕೀಳದಿರೆ,
ನಿಮ್ಮೀ ರೌದ್ರನರ್ತನವ ನೋಡಲಾರೆ,
ನನ್ನವರ ನರಕಯಾತನೆ ತಾಳಲಾರೆ,
ಓ ನನ್ನ ಜೀವನಾಡಿ ನದಿ ನೀರೆ,
ನೀವಲ್ಲವೇ ನಮ್ಮ ಜೀವನಧಾರೆ,
ಹೇ ವರುಣ ನಮಿಸುವೆ ಮನಸಾರೇ,
ಚಿಮ್ಮಿಸದಿರು ನಿನ್ನ ವೇಗದ ಜಲಧಾರೆ,
ರಕ್ಷಿಸು ಪ್ರಾಣಿ ಹಾಗೂ ಜನರ ಉಸಿರೇ,
ಮಾಡದಿರು ಜರರನ್ನ ನಮ್ಮಿಂದ ಬೇರೆ,
ನೆರೆಯಲ್ಲ ನದಿಗಳಾಗಲಿ ಜೀವನಧಾರೆ.

*ಡಾ. ಶಿವಾಜಿ ಭಂಡಾರಕರ್*
*(ನೆರೆಪೀಡಿತರಿಗೆ ಈ ಕವಿತೆ ಅರ್ಪಣೆ)*





# ನಮನ ತಾಯೇ

ಓಽಽ ಭೂಮಿ ತಾಯೇ ವಸುಂಧರೇ
ನೀನದೆಷ್ಟು ಸುಂದರೆ !! ನಿನಗೆ ನಮನ !!
ನಿನ್ನ ಅಂದವ ನೋಡಿದಷ್ಟೂ, ಪುನಃ ಪುನಃ
ನೋಡಬೇಕೆಂಬಾಶೆ ಮನದೊಳು ಮೂಡುತಿದೆ
ಭಗವಂತನುದರದಲಿ ಅರಳಿರುವ ಹೂವೇ
ಎಂತಹ ಚೆಲುವು ನಿನ್ನದು? ಆಗಸದ–
ದೇವತೆಗಳೆಲ್ಲ ಸಂತಸದಿ ಪೊರೆಯುವ
ಧರೆಯೋ, "ಕ್ಷಮಯಾಧರಿತ್ರಿ" ಯಾಗಿರುವಿ !!
ಮಳೆಯ ತರುವೆ, ನೀರನೀಡುವೆ, ಬಿತ್ತಿ
ಬೆಳೆಯುವ ಧಾನ್ಯದಲಿ ಜೀವಕಳೆಯನು ತುಂಬಿ
ಮನುಜ ಕುಲವನ್ನೇ ಉದ್ಧರಿಸುತ್ತಿರುವೆ !
ತಂಪು ಗಾಳಿಯ ಬೀಸಿ ಮನಕೆ ಅಹ್ಲಾದವನೇ ನೀಡಿ,
ಮುಖದಾರವಿಂದದಲಿ ಮುಗಳು ನಗೆಯನ್ನೇ ಇತ್ತು,
ಕಾಪಾಡುತ್ತಿರುವೆ ಓಽಽ ಜಗನ್ಮಾತೆ !!

ಎಲ್ಲೆಡೆಗೆ ಹಸಿರು, ಪ್ರಾಣಿ ಪಕ್ಷಿಗಳ ಉಸಿರು,
ಮಾವು, ತೆಂಗು, ಹಲಸು ಹಣ್ಣುಗಳನ್ನಿತ್ತು–
ಹಸಿರು ಸೀರೆಯನುಟ್ಟು ಕೆಂದಾವರೆಗಳ
ಕುಂಕುಮದ ಬೊಟ್ಟು, ಗುಲಾಬಿ ಮಲ್ಲಿಗೆಗಳ
ಸುಗಂಧವೂ ಶ್ರೀ ಗಂಧದ ಗಿಡಗಳಿಗೂ ಮುಟ್ಟಿ
ಎಲ್ಲೆಡೆಗೂ ಹರಡುತಿದೆ ಸುವಾಸನೆ !!
ಸೂರ್ಯನುದಯ–ಅಸ್ತಗಳು ನಿನ್ನ ಬೆನ್ನ ಹಿಂದೆ,
ಚಂದ್ರ–ನಕ್ಷತ್ರಗಳ ಒನಪು ವೈಯ್ಯಾರ ನಿನ್ನ ಉಡಿಯಲ್ಲಿ !
ನಿನ್ನ ಸೃಷ್ಟಿಯ ಮನೆಯ ಮಕ್ಕಳು ನಾವು
ಆಡುವೆವು ಇಲ್ಲಿ, ಹೆಸರು ಗಳಿಸುವೆವು ಇಲ್ಲಿ
ಇಂದಿಲ್ಲ ನಾಳೆ ಮತ್ತೆ ಲೀನವಾಗುವೆವು ನಿನ್ನಲ್ಲಿಯೇ
ತಪ್ಪಿದ್ದರೆ ಕ್ಷಮಿಸು ತಾಯೇ, ದಿನವೂ
ಅನುದಿನವೂ ನಿನಗೇ ನಮನ ತಾಯೇ !!!

*ಸುಧಾಕರ ಕುರಂದವಾಡ*

# ಮೇಧಾವಿ ಮೇರಿ

ಮಕ್ಕಳೇ, ಈ ಸಂಚಿಕೆ ನಿಮ್ಮ ಕೈ ಸೇರುವಷ್ಟರಲ್ಲಿ ನೀವು ಗಣೇಶ ಚೌತಿಯನ್ನು ಸಂಭ್ರಮದಿಂದ ಆಚರಿಸಿ ಮನೆಯಲ್ಲಿಟ್ಟ ಚಕ್ಕುಲಿ, ಮೋದಕ ಮತ್ತು ಇತರ ತಿಂಡಿಗಳನ್ನೆಲ್ಲಾ ಹುಡುಕಿ ಹುಡುಕಿ ತಿಂದು ಮುಗಿಸಿರುತ್ತೀರಿ ಅಂದ್ಕೋತೀನಿ. ಗಣೇಶ ಅಂದ್ಕೂಡ್ಲೇ ಏನು ನೆನಪಾಗುತ್ತೆ? ಬುದ್ಧಿಗೆ ಸಂಬಂಧಪಟ್ಟ ದೇವರು ಅಂತ ನೆನಪಾಗುತ್ತೆ ಅಲ್ವಾ?...ಹೀಗಾಗಿ ಮೇಧಾವಿಯೊಬ್ಬರ ಕಥೆಯನ್ನ ಈ ಸಂಚಿಕೆಯಲ್ಲಿ ಹೇಳ್ತೀನಿ. ನೀವು ಮೇರಿ ಕ್ಯೂರಿಯವರ ಹೆಸರನ್ನ ಕೇಳಿದೀರಾ? ಕೇಳಿರಬಹುದು. ಆದರೆ ಅವರ ಜೀವನ ಕಥೆಯನ್ನು ಕೇಳಿರಲಿಕ್ಕಿಲ್ಲ ಅಲ್ವಾ? ಹೇಳ್ತೀನಿ ಕೇಳಿ...

ಪ್ರತೀ ದಿನ ಸಂಜೆ ವೇಳೆ ಸ್ಕ್ಲೋಡೋವ್‌ಸ್ಕಾ ಮನೆಯ ಎಲ್ಲರೂ ಒಟ್ಟಿಗೇ ಕೂತು ಓದು-ಬರಹದಲ್ಲಿ ನಿರತರಾಗಿರುತ್ತಿದ್ದರು. ಅಪ್ಪ-ಅಮ್ಮ ಇಬ್ಬರೂ ಶಿಕ್ಷಕರಾಗಿದ್ದ ಕಾರಣ ಮಕ್ಕಳಾದ ಜೋಸಿಯಾ, ಬ್ರೋನ್ಯಾ, ಹೆಲೆನಾ ಮತ್ತು ಜೋಸಿಯೋರಿಗೆ ಹೋಮ್ ವರ್ಕ್ ಮಾಡುವುದಕ್ಕೆ ಯಾವ ಸಮಸ್ಯೆಯೂ ಇರಲಿಲ್ಲ. ತಂದೆ ವ್ಲಾಡಿಶಾ ಸ್ಕ್ಲೋಡೋವ್‌ಸ್ಕಿಯವರಿಗೆ ಕಲಿಯುವ ಹಸಿವು



ಅಪಾರವಾಗಿತ್ತು. ಹೀಗಾಗಿ ಅವರಿಗೆ ತಮ್ಮ ಎಲ್ಲಾ ಮಕ್ಕಳೂ ಓದಿ ಬುದ್ಧಿವಂತರಾಗಬೇಕೆಂಬ ಹಂಬಲ ಉತ್ಕಟವಾಗಿತ್ತು. ಅಮ್ಮ ಬ್ರೋನಿಸ್ಲಾವಾ, ಪೋಲ್ಯಾಂಡಿನ ವಾರ್‌ಸಾದ ಬಾಲಕಿಯರ ಶಾಲೆಯಲ್ಲಿ ಮುಖ್ಯಾಧ್ಯಾಪಕಿಯಾಗಿದ್ದರು.

ಅದೊಂದು ಸಂಜೆ ಎಂದಿನಂತೇ ಹೋಮ್ ವರ್ಕ್ ಮಾಡಲು ಮಕ್ಕಳೆಲ್ಲ ಕುಳಿತಿದ್ದಾಗ 7 ವರ್ಷದ ಸಹೋದರಿ ಬ್ರೋನ್ಯಾ ಒಂದು ಪ್ಯಾರಾ ಓದುವಾಗ ತಡವರಿಸಿಬಿಟ್ಟಳು. ಅದೇ ವೇಳೆ ಅಲ್ಲಿ ಆಟವಾಡುತ್ತ ಕುಳಿತಿದ್ದ ಮೂರುವರೆ ವರ್ಷದ ಮೇರಿ ತನ್ನ ಅಕ್ಕ ಬ್ರೋನ್ಯಾಳ ಪುಸ್ತಕವನ್ನು ಎಳೆದುಕೊಂಡು ಅದೇ ಪ್ಯಾರಾವನ್ನು ಸುಲಲಿತವಾಗಿ, ತಪ್ಪಿಲ್ಲದಂತೆ ಓದಿ ಮುಗಿಸಿ ತಲೆ ಎತ್ತಿ ನೋಡಿದಾಗ ಆ ಇಡೀ ಕುಟುಂಬ ನಿಬ್ಬೆರಗಾಗಿ ನೋಡುತ್ತ ಕುಳಿತಿತ್ತು!! ತನ್ನ ಅಪ್ಪ-ಅಮ್ಮ, ಅಕ್ಕಂದಿರು ಎಲ್ಲರೂ ತನ್ನನ್ನು ನಿಬ್ಬೆರಗಾಗಿ ನೋಡುವುದನ್ನು ಕಂಡ ಆ ಪುಟಾಣಿ ಮೇರಿ ತನ್ನಿಂದ ಏನೋ ತಪ್ಪಾಗಿಬಿಟ್ಟಿತೇನೋ ಎಂದು ಜೋರಾಗಿ ಅಳತೊಡಗಿದಳು. "ನಾನು ಬೇಕಂತಲೇ ಹೀಗೆ ಮಾಡಿಲ್ಲ!" ಎಂದು ಮುಗ್ಧವಾಗಿ ಹೇಳಿಕೊಂಡಳು.

ಈ ಘಟನೆಯು ಮುಂದೊಂದು ದಿನ ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳಲ್ಲಿ ಅದ್ಭುತವಾಗಿ ಸಂಶೋಧನೆ ಮಾಡಲಿರುವ ಮಹಾನ್ ವಿಜ್ಞಾನಿಯ ಪರಿಚಯಕ್ಕೆ ನಾಂದಿಯಾಗಿತ್ತು. ಜೀವನ ಪರ್ಯಂತ ಓದಿನ ಹಸಿವನ್ನು ಜಾಗೃತವಾಗಿಟ್ಟುಕೊಂಡ, ಪ್ರತಿಯೊಂದು ವಿಷಯವನ್ನೂ ತಿಳಿದುಕೊಳ್ಳುವುದಕ್ಕೆ ತೀವ್ರ ಆಸಕ್ತಿ ಹೊಂದಿದ ಮೇರಿ ಅಸಾಧಾರಣ ಬುದ್ಧಿಮತ್ತೆಯನ್ನು ಹೊಂದಿದ್ದಷ್ಟೇ ಅಲ್ಲ, ಅತ್ಯಂತ ಸಂವೇದನಾಶೀಲ ವ್ಯಕ್ತಿತ್ವವನ್ನೂ ಹೊಂದಿದ್ದರು.

ವಯಸ್ಸಿಗೆ ಮೀರಿದ ಬೆಳವಣಿಗೆಯನ್ನು ಮೇರಿಯಲ್ಲಿ ಕಂಡ ತಂದೆ ತಾಯಿಗಳು ಆಕೆಯ ಗಮನವನ್ನು ಓದಿನಿಂದ ಬೇರೆಡೆಗೆ ಸೆಳೆಯುವುದಕ್ಕಾಗಿ ಆಗಾಗ ಪ್ರವಾಸಕ್ಕೆ ಕರೆದುಕೊಂಡು ಹೋಗುತ್ತಿದ್ದರು, ದಣಿವಾಗುವಷ್ಟು ಆಡಿಸುತ್ತಿದ್ದರು. ಆದರೂ ಕೂಡ ಪುಸ್ತಕದ ಬಗ್ಗೆ ಆಕೆಗಿದ್ದ ಆಸಕ್ತಿಯಲ್ಲಿ ಒಂದಿಷ್ಟೂ ಇಳಿಕೆಯಾಗಲಿಲ್ಲ. ಒಂದು ದಿನ ಆಕೆ ಏಕಾಗ್ರತೆಯಿಂದ ಪುಸ್ತಕವೊಂದನ್ನು ಓದುತ್ತಿದ್ದಾಗ ಆಕೆಯ ಅಕ್ಕ-ಅಣ್ಣಂದಿರು ಅವಳ ಹಿಂದೆ ಕೆಲವು ಪೀಠೋಪಕರಣಗಳನ್ನು ಪೇರಿಸಿಟ್ಟು ಜೋರಾಗಿ ಶಬ್ದವಾಗುವಂತೆ ಬೀಳಿಸಿಬಿಟ್ಟರು. ಆದರೂ ಮೇರಿಯ ಏಕಾಗ್ರತೆಗೆ ಭಂಗವಾಗಲಿಲ್ಲ!! ಆದರೆ ಅಣ್ಣ-ಅಕ್ಕಂದಿರು ಜೋರಾಗಿ ಕೇಕೇ ಹಾಕಿದಾಗ ಅವಳು ಒಮ್ಮೆ ಹಿಂತಿರುಗಿ ನೋಡಿ ಹೇಳಿದಳು "ಎಷ್ಟು ಹುಚ್ಚು!"

ನಡೆದಾಡುವ ವಿಶ್ವಕೋಶದಂತಿದ್ದ ತನ್ನ ತಂದೆಯ ನೆರಳಿನಲ್ಲಿ ಅವರನ್ನೇ ಆದರ್ಶವಾಗಿಟ್ಟುಕೊಂಡು ಬೆಳೆದ ಮೇರಿ, ವಾರ್‌ಸಾದಲ್ಲಿ 1867ರ ನವೆಂಬರ್ 7 ರಂದು ಹುಟ್ಟಿದರು. ಅತಿಥಿಗಳು, ವಿದ್ಯಾರ್ಥಿಗಳಿಂದಲೇ ತುಂಬಿಕೊಂಡಿರುತ್ತಿದ್ದ ತನ್ನ ಮನೆಯ ಮತ್ತು ಶಾಲೆಯ ಜವಾಬ್ದಾರಿಯನ್ನು ತಮ್ಮ ತಾಯಿ ನಿಭಾಯಿಸುವ ರೀತಿಯನ್ನು ನೋಡುತ್ತ ಬೆಳೆದಳು ಮೇರಿ. ಅದೊಂದು ದಿನ ಮೇರಿಯ ದೊಡ್ಡಪ್ಪ ತಮಗೆ ಕ್ಷಯರೋಗ(ಟಿ.ಬಿ)ವಾದ ಕಾರಣ ತಮ್ಮನ ಮನೆಯಲ್ಲಿ ಆರೈಕೆ ಪಡೆಯುವುದಕ್ಕೆ ಬರುತ್ತಾರೆ. ಆಗ ಕ್ಷಯರೋಗಕ್ಕೆ ಔಷಧವೇ ಇರಲಿಲ್ಲ! ಕೆಮ್ಮು ಮತ್ತು ಸೀನುಗಳ ಮೂಲಕ ಹರಡುವ ಆ ರೋಗವು ಮೇರಿಯ ತಾಯಿಗೆ ತಗಲುತ್ತದೆ. ಪೋಲ್ಯಾಂಡ್ ದೇಶವು ಅತ್ಯಂತ ಶೀತ ಪ್ರದೇಶವಾದ್ದರಿಂದ ಆ ರೋಗಕ್ಕೆ ಚಿಕಿತ್ಸೆ ಮಾಡಿಸುವುದಕ್ಕಾಗಿ, ತುಸು ಉಷ್ಣತೆ ಹೆಚ್ಚಾಗಿರುವ ದೇಶ ಫ್ರಾನ್ಸ್‌ಗೆ ಆಕೆಯನ್ನು ಕರೆದೊಯ್ಯಲಾಗುತ್ತದೆ. ಪಾಪ! ಮೇರಿಗೆ ಬಾಲ್ಯದಲ್ಲೇ ತಾಯಿಯಿಂದ ದೂರವಾಗುವ ಪರಿಸ್ಥಿತಿ!. ಆ ವೇಳೆ ತಾಯಿಯ ಸೇವೆಗಾಗಿ ಫ್ರಾನ್ಸ್‌ಗೆ ತೆರಳುತ್ತಾಳೆ ಮೇರಿಯ ಅಕ್ಕ ಜೋಸಿಯಾ.

ತನಗೆ ಬಂದ ರೋಗ ತನ್ನ ಮಕ್ಕಳಿಗೆ ಬಂದರೇನು ಗತಿ? ಎಂಬ ಚಿಂತೆ ತಾಯಿ ಬ್ರೋನಿಸ್ಲಾವಾರಿಗೆ ಕಾಡುತ್ತಿತ್ತು. ಫ್ರಾನ್ಸ್‌ನಿಂದ ಚಿಕಿತ್ಸೆ ಪಡೆದು ಮರಳಿ ಬಂದ ಆಕೆ ಮನೆಯಿಂದ ದೂರದಲ್ಲಿ ಒಂದು ಕೋಣೆಯಲ್ಲಿ ಏಕಾಂಗಿಯಾಗಿರುತ್ತಿದ್ದರು. ಮಕ್ಕಳಿಗೆ ತಮ್ಮ ಪ್ರೀತಿಯನ್ನು ತೋರುವುದಕ್ಕಾಗಿ ಆಕೆ ಕೋಣೆಯ ಕಿಟಕಿಯಿಂದಲೇ ಕೈಯನ್ನು ಹೊರಚಾಚಿ ಮಕ್ಕಳ ತಲೆ ನೇವರಿಸುತ್ತ, ಪಿಯಾನೋ ನುಡಿಸುತ್ತ ಹಾಡು ಹೇಳುತ್ತಿದ್ದರು, ಕತೆಗಳನ್ನು ಓದಿ ಹೇಳುತ್ತಿದ್ದರು. ತಾಯಿಯ ಸಮೀಪದಲ್ಲಿ ಕೋಣೆಯ ಹೊರಗಡೆ ಕಣ್ಮುಚ್ಚಿ ಕುಳಿತು ಆಕೆ ಹಾಡುವುದನ್ನು ಕೇಳುವುದೇ ಮೇರಿಯ ಪಾಲಿಗೆ ಸ್ವರ್ಗವಾಗಿತ್ತು.

ತಾಯಿ ಬ್ರೋನಿಸ್ಲಾವಾ ಅವರು ತಮ್ಮ ರೋಗದ ಕಾರಣ ನೌಕರಿಗೆ ರಾಜೀನಾಮೆ ನೀಡಿದ್ದರು. ಹೀಗಾಗಿ ಕುಟುಂಬದ ಮುಂದೆ ಹಣಕಾಸಿನ ತೊಂದರೆ ಭೂತದಂತೆ ಎದುರಾಯಿತು. ಈಗ

## ಪ್ರಕಟಣೆ

**ದೆಹಲಿಯಲ್ಲಿರುವ ಕನ್ನಡಿಗರ ಮಕ್ಕಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಈ ಸಂಚಿಕೆಯಿಂದ ಹೊಸದಾಗಿ 'ಚಿಣ್ಣರ ಲೋಕ' ಎಂಬ ಪುಟವನ್ನು ಆರಂಭಿಸಲಾಗಿದೆ. ಹನ್ನೆರಡು ವರ್ಷದ ಒಳಗಿನ ಬಾಲಕ ಬಾಲಕಿಯರು ತಮ್ಮ ಪ್ರತಿಭೆಯನ್ನು ಇಲ್ಲಿ ಅನಾವರಣಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಮಕ್ಕಳ ಕಥೆ, ಕವನ, ಚಿತ್ರಕಲೆ ಮತ್ತು ಸಂಘದ ಆಜೀವ ಸದಸ್ಯರ ಮಕ್ಕಳು ಪಡೆದ ವಿಶೇಷ ಬಹುಮಾನಗಳ ವರದಿ ಇತ್ಯಾದಿಗಳನ್ನು ಇಲ್ಲಿ ನೀಡಬಹುದು. ಮಕ್ಕಳಿಗಾಗಿ ದೊಡ್ಡವರು ಕೂಡಾ ಇಲ್ಲಿ ಬರೆಯಬಹುದು. ತಮ್ಮ ಬರಹಗಳನ್ನು** email:dksangha@gmail.com **ಮೇಲ್ ಮಾಡಬಹುದು. ಈ ಬಾರಿ ಅಭಿಮತ ಸಂಪಾದಕ ಮಂಡಳಿಯ ಸದಸ್ಯ ಸಂತೋಷ್ ಕುಮಾರ್ ಉಪಾಧ್ಯಾಯ ಅವರು ಚಿಣ್ಣರಿಗಾಗಿ ಬರೆದ ಬರಹ ಇಲ್ಲಿದೆ.**

**-ಸಂಪಾದಕ**

**ಕೇಳಿದ ಪ್ರಶ್ನೆಗಳಿಗೆ ನಿರರ್ಗಳವಾಗಿ ರಶಿಯನ್ ಭಾಷೆಯಲ್ಲೇ ಉತ್ತರ ಕೊಡುತ್ತಿದ್ದ ಬಾಲಕಿ ಮೇರಿಗೆ ಇಡೀ ಶಾಲೆಯ ಮರ್ಯಾದೆಯ ಭಾರವನ್ನು ಹೊರುವುದು ಕೆಲವು ಸಲ ತುಂಬಾ ಹಿಂಸೆಯಾಗುತ್ತಿತ್ತು. ಆಕೆ ತನ್ನ ಶಿಕ್ಷಕಿ ಟುಪಾಲ್‌ಸ್ಕಾ ಅವರ ಮಡಿಲಿನಲ್ಲಿ ಮುಖವನ್ನು ಹುದುಗಿಸಿ ಅಳುತ್ತಿದ್ದಳು.**

ಏನು ಮಾಡುವುದು? ಮನೆಯ ಒಂದೊಂದೇ ಕೋಣೆಗಳನ್ನು ವಿದ್ಯಾರ್ಥಿಗಳಿಗೆ ಬಾಡಿಗೆಗೆ ಕೊಡಲು ಮುಂದಾದರು. ವೆಚ್ಚವನ್ನು ಕಡಿಮೆ ಮಾಡುವುದಕ್ಕಾಗಿ ತಮ್ಮ ಮಕ್ಕಳ ಶೂಗಳನ್ನು ಬ್ರೋನಿಸ್ಲಾವಾ ತಾವೇ ಸ್ವತಃ ಮಾಡಿಕೊಡಲು ತೊಡಗಿದರು.

ಮೇರಿಯ 11ನೇ ಜನ್ಮದಿನಕ್ಕೆ ಕೆಲವೇ ತಿಂಗಳುಗಳು ಬಾಕಿ ಇರುವಾಗಲೇ ಆಕೆಯ ಜೀವನದ ಅತಿ ದೊಡ್ಡ ದುರಂತ ಸಂಭವಿಸಿತು. ಪ್ರೀತಿಯ ತಾಯಿ ಕ್ಷಯರೋಗದ ವಿರುದ್ಧದ ಹೋರಾಟದಲ್ಲಿ ಸೋತು ಹೋಗಿದ್ದರು. ತಾಯಿಯ ಮರಣಕ್ಕೆ ಎರಡು ವರ್ಷ ಮೊದಲು ಅಕ್ಕ ಜೊಸಿಯಾ ಕೂಡಾ ರೋಗಗ್ರಸ್ತಳಾಗಿ ತನ್ನ ಕೊನೆಯುಸಿರೆಳೆದಿದ್ದಳು. ತಾಯಿಯನ್ನು ಕಳೆದುಕೊಂಡಂದಿನಿಂದ ಮೇರಿಯಲ್ಲಿ ಹೊಸದೊಂದು ಸಂಕಲ್ಪ ಮೂಡಿತ್ತು. ವಿಜ್ಞಾನ ಮತ್ತು ಔಷಧಗಳ ಸಹಾಯದಿಂದ ಮಾನವ ಜನಾಂಗದ ಸೇವೆ ಮಾಡುವ ಕನಸು ಅವರಲ್ಲಿ ಆಳವಾಗಿ ಬೇರೂರಿತು.

ತಂದೆ ವ್ಲಾಡಿಶಾ ಸ್ಕ್ಲೊಡೋವ್‌ಸ್ಕಿ ತಮ್ಮ ಮಕ್ಕಳಿಗೆ ಗ್ರೀಕ್, ಲ್ಯಾಟಿನ್, ರಶಿಯನ್, ಪೋಲಿಶ್, ಫ್ರೆಂಚ್, ಜರ್ಮನ್ ಮತ್ತು ಇಂಗ್ಲಿಷ್ ಭಾಷೆಗಳನ್ನು ಕಲಿಸುವಲ್ಲಿ ತುಂಬಾ ಮುತುವರ್ಜಿ ವಹಿಸಿದರು. ಆಗಾಗ ಅವರು ಭೌತ ಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಓದಿ ಹೇಳುವ ಮೂಲಕ ವಿಜ್ಞಾನದ ಕುರಿತು ತಮ್ಮ ಮಕ್ಕಳಲ್ಲಿ ಆಸಕ್ತಿ ಮೂಡಲು ತಳಪಾಯ ಹಾಕಿದರು.

ಆ ದಿನಗಳಲ್ಲಿ ಪೋಲ್ಯಾಂಡ್‌ನ್ನು ರಶಿಯಾ ಆಕ್ರಮಿಸಿಕೊಂಡಿತ್ತು. ಪೋಲ್ಯಾಂಡಿನ ಪ್ರತಿಯೊಂದು ಶಾಲೆಯಲ್ಲಿ ರಶ್ಯನ್ ಭಾಷೆಯ ಕಲಿಕೆಯನ್ನು ಹೇರಲಾಗಿತ್ತು. ರಶಿಯಾದ ಇನ್ಸಪೆಕ್ಟರ್‌ಗಳು ಆಗಾಗ ಶಾಲೆಗಳಿಗೆ ದಿಢೀರ್ ಭೇಟಿ ನೀಡಿ ರಶಿಯನ್ ಭಾಷೆಯನ್ನು ಕಲಿಸಲಾಗುತ್ತಿದೆಯೋ ಇಲ್ಲವೋ ಎಂಬುದನ್ನು ಪರೀಕ್ಷೆ ಮಾಡುತ್ತಿದ್ದರು. ಮಾತೃಭಾಷೆ ಪೋಲಿಶ್‌ನ್ನು ಕಲಿಸುವುದಕ್ಕೆ ನಿಷೇಧ ಹೇರಲಾಗಿತ್ತು. ಆದರೆ ಮೇರಿ ಕಲಿಯುತ್ತಿದ್ದ ಶಾಲೆಯಲ್ಲಿ ಆಕೆಯ ಶಿಕ್ಷಕಿಯಾಗಿದ್ದ ಆ್ಯಂಟೊನಿನ್ ಟುಪಾಲ್‌ಸ್ಕಾ ಅವರಿಗೆ ಬಲವಾದ ನಂಬಿಕೆಯಿತ್ತು–ಮೇರಿಗೆ ಎಲ್ಲಾ ವಿಷಯಗಳಲ್ಲೂ ಹಿಡಿತವಿದೆ, ಆಕೆ ಎಲ್ಲಾ ಪರೀಕ್ಷೆಗಳನ್ನು ಎದುರಿಸಲು ಸಮರ್ಥಳು ಎಂದು. ಹೀಗಾಗಿ ಶಾಲೆಗೆ ಇನ್‌ಸ್ಪೆಕ್ಟರ್‌ಗಳು ಆಗಮಿಸಿದಾಗಲೆಲ್ಲಾ ಪರೀಕ್ಷೆಗೆ ಶಿಕ್ಷಕರು ಮೇರಿಯನ್ನೇ ಮುಂದೆ ಮಾಡುತ್ತಿದ್ದರು. ರಶಿಯನ್ ಭಾಷೆ ಮತ್ತು ರಶಿಯಾದ ಇತಿಹಾಸಗಳಲ್ಲಿ ಮೇರಿಗೆ ಸಾಕಷ್ಟು ಹಿಡಿತವಿತ್ತು. ಕೇಳಿದ ಪ್ರಶ್ನೆಗಳಿಗೆ ನಿರರ್ಗಳವಾಗಿ ರಶಿಯನ್ ಭಾಷೆಯಲ್ಲೇ ಉತ್ತರ ಕೊಡುತ್ತಿದ್ದ ಬಾಲಕಿ ಮೇರಿಗೆ ಇಡೀ ಶಾಲೆಯ ಮರ್ಯಾದೆಯ ಭಾರವನ್ನು ಹೊರುವುದು ಕೆಲವು ಸಲ ತುಂಬಾ ಹಿಂಸೆಯಾಗುತ್ತಿತ್ತು. ಆಕೆ ತನ್ನ ಶಿಕ್ಷಕಿ ಟುಪಾಲ್‌ಸ್ಕಾ ಅವರ ಮಡಿಲಿನಲ್ಲಿ ಮುಖವನ್ನು ಹುದುಗಿಸಿ ಅಳುತ್ತಿದ್ದಳು.


ತಾಯಿಯ ನಿಧನದ ನಂತರ ಮನೆಯ ಜವಾಬ್ದಾರಿಯನ್ನು ಮೇರಿಯ ಅಕ್ಕ ಬ್ರೋನ್ಯಾ ವಹಿಸಿಕೊಂಡಳು. ಮನೆಯ ಜವಾಬ್ದಾರಿಯನ್ನು ಮತ್ತು ಶಾಲೆಯ ಓದನ್ನು ಸರಿತೂಗಿಸುತ್ತ ಬ್ರೋನ್ಯಾ ಇಡೀ ಶಾಲೆಗೇ ಮೊದಲ ಸ್ಥಾನ ಪಡೆದಳು. ಇದು ಮೇರಿಗೆ ಆದರ್ಶವಾಯಿತು. ಅತ್ಯಂತ ಪರಿಶ್ರಮದಿಂದ ಓದಿದ ಮೇರಿ ತನ್ನ ಹದಿನೈದನೇ ವಯಸ್ಸಿನಲ್ಲಿ ಪ್ರೌಢಶಾಲೆಯ ಓದನ್ನು ಬಂಗಾರದ ಪದಕವನ್ನು ಪಡೆದುಕೊಳ್ಳುವುದರೊಂದಿಗೆ ಪೂರ್ಣಗೊಳಿಸಿದಳು. ತೀವ್ರವಾಗಿ ಅಧ್ಯಯನ ಮಾಡಿದ ಕಾರಣ ಮೇರಿಯ ಆರೋಗ್ಯ ಹದಗೆಟ್ಟಿತು. ಅವಳಿಗೆ ಹೊಸ ವಾತಾವರಣವನ್ನು ಒದಗಿಸುವ ಉದ್ದೇಶದಿಂದ ಆಕೆಯ ತಂದೆ ಅವಳನ್ನು ಮತ್ತು ಅವಳ ಅಕ್ಕ ಹೆಲೆನಾಳನ್ನು ಅವರ ಸೋದರ ಮಾವನ ಮನೆಯಲ್ಲಿರುವಂತೆ ಮಾಡಿದರು. ಅಲ್ಲಿ ಮೇರಿಗೆ ಅತ್ಯುತ್ಕೃಷ್ಟ ಕಲಾವಿದರ, ವಿಜ್ಞಾನಿಗಳ, ಸಂಶೋಧಕರ ಪರಿಚಯವಾಗತೊಡಗಿತು. ಅದರಿಂದ ಅವಳ ಓದಿನ ಹಸಿವು ಇನ್ನಷ್ಟು ಹೆಚ್ಚಿತು.

ಆ ಕಾಲದಲ್ಲಿ ವಿದ್ಯಾರ್ಥಿ–ವಿದ್ಯಾರ್ಥಿನಿಯರ ನಡುವೆ ತಾರತಮ್ಯ ತೋರುತ್ತಿದ್ದ ಪೋಲ್ಯಾಂಡಿನ ವ್ಯವಸ್ಥೆಯಿಂದ ಬೇಸತ್ತು ಹೋದ ಮೇರಿ ಮುಂದೆ ತಮ್ಮ 24ನೇ ವಯಸ್ಸಿನಲ್ಲಿ ಫ್ರಾನ್ಸ್ ದೇಶಕ್ಕೆ ತೆರಳಿ ಅಲ್ಲಿನ ಪೌರತ್ವವನ್ನು ಪಡೆದರು. ಅಲ್ಲಿ ರೇಡಿಯೋ ಆ್ಯಕ್ಟಿವಿಟಿ ವಿಷಯದಲ್ಲಿ ಆಳವಾಗಿ ಅಧ್ಯಯನ ಮಾಡಿ ಯುರೋಪಿನ ಎರಡನೇ ಅತ್ಯಂತ ಹಳೆಯ ವಿಶ್ವವಿದ್ಯಾಲಯವಾದ ಸೋರ್‌ಬೋನ್ನೆ (ಪ್ಯಾರಿಸ್) ವಿಶ್ವವಿದ್ಯಾಲಯದಲ್ಲಿ ಪ್ರಪ್ರಥಮ ಮಹಿಳಾ ಪ್ರೊಫೆಸರ್ ಎನಿಸಿಕೊಂಡರು. ಪಿಯರೆ ಕ್ಯೂರಿಯವರ ಕೈ ಹಿಡಿದ ಮೇರಿ ನಂತರದ ದಿನಗಳಲ್ಲಿ ಕ್ಷಕಿರಣದ (ಎಕ್ಸ್ ರೇ) ವಿಷಯದಲ್ಲಿ ಆಳವಾಗಿ ಸಂಶೋಧನೆ ಮಾಡಿ ಜಗತ್ತಿನ ಗಮನ ಸೆಳೆಯುತ್ತಾರೆ. 1903 ರಲ್ಲಿ ಭೌತಶಾಸ್ತ್ರಕ್ಕೆ ಮತ್ತು 1911 ರಲ್ಲಿ ರಸಾಯನ ಶಾಸ್ತ್ರಕ್ಕೆ ನೊಬೆಲ್ ಪ್ರಶಸ್ತಿಯನ್ನು ಪಡೆಯುವ ಮೂಲಕ ಎರಡು ಬೇರೆ ಬೇರೆ ವಿಷಯದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಮೊತ್ತ ಮೊದಲ ವ್ಯಕ್ತಿಯಾದರು. ಅವರ ಪತಿ ಪಿಯರೆ ಕ್ಯೂರಿ, ಮಗಳು ಇರಿನ್ ಜೋಲಿಯಟ್–ಕ್ಯೂರಿಯವರಿಗೂ ನೊಬೆಲ್ ಪ್ರಶಸ್ತಿ ದೊರೆತಿದೆ. ಜನಿಸಿ ನೂರೈವತ್ತು ವರ್ಷಗಳ ಬಳಿಕವೂ ಕೂಡಾ ಮೇರಿ ಕ್ಯೂರಿಯವರು ವಿಜ್ಞಾನ ಕ್ಷೇತ್ರದಲ್ಲಿ ಮಾಡಿದ ಸಾಧನೆ ಒಂದಿಷ್ಟೂ ಮಾಸದೇ ಧ್ರುವ ತಾರೆಯಂತೆ ಉಳಿದುಕೊಂಡಿದೆ. ಎಕ್ಸ್‌ರೇ ವಿಷಯ ಬಂದಾಗಲೆಲ್ಲಾ ನಮಗೆ ಇನ್ನು ಮೇರಿ ಕ್ಯೂರಿಯವರು ನೆನಪಾಗುತ್ತಾರೆ ಅಲ್ಲವೇ?

ಮಕ್ಕಳೇ, ಈ ಕಥೆ ನಮಗೆ ಪ್ರೇರಣೆ ಅಲ್ಲವೇ? ಜೀವನದಲ್ಲಿ ಅದೆಷ್ಟೇ ಕಷ್ಟಗಳು ಎದುರಾದರೂ ಧೈರ್ಯಗೆಡದೆ ಹೆಜ್ಜೆ ಇಟ್ಟು ಸಾಧನೆ ಮಾಡುವ ಛಲ ನಿಮ್ಮಲ್ಲಿದೆ ಅಲ್ಲವೇ? ಮುಂದಿನ ಸಂಚಿಕೆಯಲ್ಲಿ ಹೊಸದೊಂದು ಕಥೆಯೊಂದಿಗೆ ಬರುತ್ತೇನೆ...

ಇಂತೀ ನಿಮ್ಮ

***ಸಂತೋಷ್ ಮಾಮಾ***



**ಪತಿ ಪಿಯರೆ ಕ್ಯೂರಿಯವರೊಂದಿಗೆ ಎಕ್ಸ್‌ರೇ ಯಂತ್ರದ ಸಂಶೋಧನೆಯಲ್ಲಿ ನಿರತ ಮೇರಿ ಕ್ಯೂರಿ**

# ಭಿವಾಡಿಯಲ್ಲಿ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ



ಕಳೆದೆರಡು ವರ್ಷಗಳಂತೆ ಈ ಬಾರಿಯೂ ನಮ್ಮ ಭಿವಾಡಿ ಕನ್ನಡ ಬಳಗದ ವತಿಯಿಂದ ತೃತೀಯ ವರ್ಷದ ಸಾಮೂಹಿಕ ಶ್ರೀ ಸತ್ಯನಾರಾಯಣ ಸ್ವಾಮಿಯ ಪೂಜೆ ಪ್ರತಿ ಯೋಜನೆಗಳ ಪ್ರಕಾರವೇ ತುಂಬಾ ಸಾಂಗವಾಗಿ ಹಾಗೂ ಸಾಕಷ್ಟು ಅದ್ದೂರಿಯಾಗಿಯೇ ನೆರವೇರಿತು.

ಭಿವಾಡಿಯ ಹಿಲ್ ವ್ಯೂಹ ಗಾರ್ಡನ್, ಟ್ರೇಹಾನ್'ನ ಕಮ್ಯೂನಿಟಿ ಭವನದಲ್ಲಿ ದಿನಾಂಕ 04.08.2019ರಂದು ನಡೆದ ಕಾರ್ಯಕ್ರಮಕ್ಕೆ ಪೂರ್ವಿಭಾವಿಯಾಗಿ ಮುಂಬಾಗಿಲನಲ್ಲಿ ಮುತ್ತೈದೆಯರಾದ ಶ್ರೀಮತಿ ವೀಣಾ ದೇಸಾಯಿ, ಶ್ರೀಮತಿ ಸುಂದರ ಪಾಂಡಿಯನ್, ಶ್ರೀಮತಿ ಗೀತಾ ಶಾಬಾದಿ ಹಾಗ ಶ್ರೀಮತಿ ಜ್ಯೋತಿ ಆರೇರ ಇವರಿಂದ ರಂಗೋಲಿಯ ಚಿತ್ತಾರ ಚೆನ್ನಾಗಿ ಮೂಡಿಬಂದಿತ್ತು.

ಆಯಾ ಚಟುವಟಿಕೆಗಳನ್ನು ಸಾಕಾರಗೊಳಿಸುತ್ತಾ ಪೂಜೆಯ ದಿನದಂದು ಬೆಳಗ್ಗೆ ಬೇಗನೆ ಬಂದು ಅಡುಗೆ ತಂಡ ತಮ್ಮ ಸಹಪಾಠಿಗಳೊಂದಿಗೆ ಇತ್ತ ಪಾತ್ರೆಗಳನ್ನು ಸಜ್ಜುಗೊಳಿಸುತ್ತಾ ಉತ್ಸಾಹಿ ತರುಣರಾದ ಶಶಿಕಾಂತ, ಸಂತೋಷ, ರಘು, ಮಹಾದೇವ, ರಾಚಣ್ಣ, ರವಿ ಹಾಗು ಪೂರ್ಣಚಂದ್ರರವರು ಹಾಗೂ ಮುಖ್ಯ ಅಡುಗೆತಜ್ಞರಾದ ಮಹೇಶ & ಸಂದೀಪ ನಿರ್ದೇಶನದಲ್ಲಿ ಸಹಾಯಕರಾದ ನಾಗಪ್ಪ ಹಾಗು ಈಶ್ವರಲಿಂಗನವರ ನೆರವಿನಿಂದ ಸಕಾಲಕ್ಕೆ ಸವಿಭೋಜನ ತಯಾರಾಗಿಸಿತ್ತು.  ಇವರೊಂದಿಗೆ ಹಿರಿಯರಾದ ಶ್ರೀ ಗೋಪಾಲಕೃಷ್ಣ ಭಟ್ ಹಾಗು ಡಾ. ಮುರಳೀಧರ ಭಟ್‌ರವರಿಂದ ಸ್ವಾಮಿಯ ಪ್ರಸಾದ (ಸಪಾದ ಪಕ್ಷ) ಸಿದ್ದಗೊಳಿಸಲಾಗಿತ್ತು.

ಇವುಗಳ ಮಧ್ಯೆ ಪ್ರತಿ ಕೆಲಸಗಳಲ್ಲಿಯೂ ಹಿರಿಯ ಕಿರಿಯರೆನ್ನದೇ ಸಹಾಯಕವಾಗಿದ್ದ ಸುಧಾಕರ ಶೆಟ್ಟಿ, ಉಮಾನಾಥ ಸಪಲಿಗ, ನವೀನ, ಸಿದ್ದು, ಅನೀಲ ಪಾಟೀಲ, ಪ್ರಕಾಶ ದೇಶಮಾನ್ಯ, ಗಂಗಾಧರ, ಮಿರ್ಜಿಯವರು ಹಾಗು ರವಿಯವರು ಸಣ್ಣಪುಟ್ಟ ಸಾಮಗ್ರಿಗಳನ್ನು ಒದಗಿಸುವಲ್ಲಿ ಸಕ್ರಿಯವಾಗಿದ್ದರು. ದೇಸಾಯಿ ದಂಪತಿಗಳು ಸ್ವಾಮಿಯ ಮಂಟಪಾದಿಗಳನ್ನು ಅಲಂಕರಿಸಿದ್ದು, ಸಜ್ಜುಗೊಳಿಸಿದ ಸ್ವಾಮಿಯ ಮಂಟಪದ ಅಲಂಕಾರ ಕಂಗೊಳಿಸುತ್ತಿತ್ತು.

ಇತ್ತ ಮಧ್ಯೆ ಈರಣ್ಣ ಭಂಡಾರಿಯವರು ಹಿರಿಯರಾದ ಬದ್ರಿನಾಥರೊಂದಿಗೆ ತಯಾರಿಸಿದ ತಂಪು ಪಾನೀಯ ಪೂಜೆಗೆ ಆಗಮಿಸುತ್ತಿದ್ದವರನ್ನು ಸಾಂತ್ವನಪಡಿಸಿತ್ತು. ಇತ್ತ ಅಡುಗೆ ಕೆಲಸ ಭರದಿಂದ ಸಾಗಿತ್ತು. ನಮ್ಮ ಬಳಗದ ಹಿರಿಯರಾದ ಶ್ರೀ ಪ್ರಭು ಪಾಟೀಲರವರು ಪೂಜೆಗೆ ಪಂಡಿತರು ಶ್ರೀಯುತ ಇಂದ್ರಮೋಹನ ಮಿಶ್ರಾರವರನ್ನು ಕರೆತರುವದರೊಂದಿಗೆ ಪೂಜೆಗೆ ದಂಪತಿ ಸಮೇತ ಆಸೀನರಾಗಿದ್ದು ಎಲ್ಲರಿಗೂ ಖುಷಿ ತಂದಿತ್ತು, ಜೊತೆಗೆ ನಮ್ಮೆಲ್ಲಾ ಭಿವಾಡಿ ಕನ್ನಡಿಗರಿಗಾಗಿ ವಿಶೇಷ ಪ್ರಾರ್ಥನೆಯನ್ನೂ ಸಹ ಸಲ್ಲಿಸಿದ್ದರು. ಪಂಡಿತರ ಉತ್ತಮ ಸ್ವಚ್ಛಂದವಾದ ಕಂಠಸಿರಿಯಿಂದ ಹೊರಹೊಮ್ಮುತ್ತಿದ್ದ ಸ್ವಾಮಿಯ ಕಥಾ ಮಾಲಿಕೆಗೆ ಜನರು ಧ್ಯಾನ ಮಗ್ನವಾಗಿದ್ದರು.

ಪೂಜೆಯೂ ಅಂತಿಮ ಹಂತದಲ್ಲಿರುವಾಗ, ಪೂರ್ವ ನಿರ್ಧಾರಿತದಂತೆ ಶ್ರೀ ನವೀನರವರು ತಮ್ಮ ಶ್ರೀಮತಿಯವರ ಜೊತೆಗೂಡಿ ಮಕ್ಕಳಿಗಾಗಿ ಏರ್ಪಡಿಸಿದ್ದ ಅಕ್ಷರಭ್ಯಾಸದೊಂದಿಗೆ ಸರಸ್ವತಿಗೆ ಪೂಜೆ ಸಲ್ಲಿಸುವದರ ಮುಖೇನ ನಮ್ಮ ಭಿವಾಡಿ ಬಳಗದ ಮತ್ತೊಂದು ಮೈಲಿಗಲ್ಲಿನ ಶ್ರೇಯವಾದ ನಮ್ಮ 'ಭಿವಾಡಿ ಕನ್ನಡ ಕಲಿಕಾ ಕೇಂದ್ರ'ವನ್ನು ಸಾಂಕೇತಿಕ ರೂಪದಲ್ಲಿಯ ಚಾಲನೆಯು ಯಾವುದೇ ತೊಂದರೆಯಿಲ್ಲದೇ ಸಾಂಗವಾಗಿ ನಡೆದಾಯಿತು. ಜೊತೆಗೆ ನಮ್ಮ ಕನ್ನಡ ಕಲಿಕಾ ಕೇಂದ್ರದ ಶಿಕ್ಷಕಿಯಾಗಿ ನೇಮಕವಾಗಿರುವ ಶ್ರೀಮತಿ ಅರುಣಾ ನಾಗಪ್ಪರವರೂ ಎರಡು ಮಾತುಗಳಲ್ಲಿ ತಮ್ಮ ಪರಿಚಯದೊಂದಿಗೆ ಮಕ್ಕಳಿಗೆ ಕನ್ನಡ ಕಲಿಯುವ ಉತ್ಸಾಹ ತುಂಬಿ ಹುರಿದುಂಬಿಸಿದರು.

ಅಷ್ಟೊತ್ತಿಗಾಗಲೇ ನಮ್ಮೊಂದಿಗೆ ಬಂದು ಸೇರಿದ್ದ ಗುರುಗ್ರಾಮ ದೆಹಲಿಯ ಸಂಘ ಸಂಸ್ಥೆಯ ಪದಾಧಿಕಾರಿಗಳು ಸದಸ್ಯರು ಕೂಡ ಸ್ವಾಮಿಯ ಕೃಪೆಗೆ ಪಾತ್ರರಾದರು. ಇವರಲ್ಲಿ ಹಲವಾರು ಗಣ್ಯರು ಎಲ್ಲರನ್ನೂ ಉದ್ದೇಶಿಸಿ ಒಳ್ಳೆಯ ಪ್ರೋತ್ಸಾಹದಾಯಕ ಮಾತುಗಳನ್ನು ನೀಡಿದ್ದು ಕೂಡ ಸ್ಮರಿಸಲೇಬೇಕು. ಇನ್ನು ಸ್ವಾಗತ ವೇದಿಕೆಯಲ್ಲಿದ್ದ ನಮ್ಮ ಬಳಗದ ಹಿರಿಯರಾದ ಶ್ರೀ ಗೋಪಾಲಕೃಷ್ಣ ಭಟ್ಟರು ಪೂಜೆಗೆ ಬರುವ ಕನ್ನಡಿಗರಿಗೆ ನಮ್ಮ ಭಿವಾಡಿ ಕನ್ನಡ ಬಳಗದ ವಿವರಣೆ ನೀಡುತ್ತಾ ಸ್ವಾಗತಿಸಿಕೊಳ್ಳುತ್ತಿದ್ದರು.

ಪ್ರತಿ ಬಾರಿಯಂತೆ ಕೊನೆಯಲ್ಲಿ ನಮ್ಮ ಇನ್ನೋರ್ವ ಮುಖ್ಯ ವ್ಯವಸ್ಥಾಪಕರಾದ ಶ್ರೀಯುತ ಜಿ.ಎಚ್. ರವಿಯವರಿಂದ ಪೂಜೆಯಲ್ಲಿ ಶ್ರಮಿಸಿದ ಎಲ್ಲರನ್ನೂ ತಮ್ಮ ಪ್ರೀತಿಯ ಮಾತುಗಳಿಂದ ಶ್ಲಾಘಿಸುವದಲ್ಲದೇ ಎಲ್ಲರ ಪರವಾಗಿ ಧನ್ಯವಾದಗಳನ್ನು ತಿಳಿಸಿದರು.

ಇನ್ನೂ ಹತ್ತು ಹಲವು ಹಿರಿಯರು ಹಾಗು ಸ್ನೇಹಿತರು ತಮ್ಮ ಅಮೂಲ್ಯ ಸಮಯವನ್ನು ಸ್ವಾಮಿಯ ಕಾರ್ಯದಲ್ಲಿ ನೀಡಿದ್ದಾರೆ. ಜತೆಗೆ ದೂರದ ಗುರುಗ್ರಾಮ ಹಾಗೂ ದೆಹಲಿಯಿಂದ ಸ್ವಾಮಿಯ ಕರೆಗೆ ಓಗೊಟ್ಟು ಬಂದಿರುವುದು ವಿಶೇಷ.

*ಗೋಪಾಲಕೃಷ್ಣ ಭಟ್*



# ಸ್ನೇಹಾ ಅಸೋಸಿಯೇಶನ್‌ನಿಂದ ಸ್ವಾತಂತ್ರ್ಯ ದಿನಾಚರಣೆ



ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನ ಸದಸ್ಯೆಯರು 73ನೇ ಸ್ವಾತಂತ್ರ್ಯ ದಿನಾಚರಣೆಯನ್ನು ದಿನಾಂಕ 15.08.2019ರಂದು ತುಂಬಾ ಅದ್ದೂರಿಯಾಗಿ ಆಚರಿಸಿದರು. ಧ್ವಜದ ಮೂರು ಬಣ್ಣಗಳಿಂದ ಒಂದನ್ನು ಆರಿಸಿ ಉಡುಗೆ, ತಿರಂಗ ಬಣ್ಣದ ಬಳೆಗಳನ್ನು ತೊಟ್ಟು ಸುಂದರವಾಗಿ ತಯಾರಾಗಿ ಸದಸ್ಯೆಯರು ಬಂದಿದ್ದರು. ಇದೆಲ್ಲವನ್ನು ನೋಡಿದಾಗ ದೇಶಭಕ್ತಿ ಉಕ್ಕಿ ಬರುತ್ತಿತ್ತು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಸದಸ್ಯೆಯರು ದೇಶಭಕ್ತಿಗೀತೆಗಳನ್ನು ಹಾಡಿದರು. 'ಸ್ವಾತಂತ್ರ್ಯ' 'ದಿನ' 'ಆಚರಣೆ' ಶಬ್ದಗಳನ್ನು ಉಪಯೋಗಿಸಿ ಕ್ರೀಡೆಯನ್ನು ಆಯೋಜಿಸಲಾಗಿತ್ತು.

*ರಾಜೇಶ್ವರಿ ಕಲ್ಲೂರ*

# 'ಕಸದಿಂದ ರಸ' ಅರಿವು ಮೂಡಿಸಿದ ಕಾರ್ಯಕ್ರಮ



ಮನೆಯ ಅಡುಗೆಯ ಮನೆಯಿಂದ ಹೊರಡುವ ತರಕಾರಿ ಮತ್ತು ಹಣ್ಣುಗಳ ಸಿಪ್ಪೆ, ಬೇಡವಾಗಿದ್ದ ಕಾಗದ, ರಟ್ಟು, ಗಿಡಗಳಿಂದ ಬಿದ್ದ ಎಲೆ, ಹೂವು ಇವೆಲ್ಲವನ್ನು ಸರಿಯಾಗಿ ಉಪಯೋಗಿಸಿ ಅವುಗಳಿಂದ ಗೊಬ್ಬರವನ್ನು ಸರಿಯಾಗಿ ಉಪಯೋಗಿಸಿ ಅವುಗಳಿಂದ ಗೊಬ್ಬರವನ್ನು ಮಾಡುವುದು ಹೇಗೆ ಅಂತ ತಿಳಿದುಕೊಳ್ಳಲು ಜುಲೈ ತಿಂಗಳಲ್ಲಿ ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್ ಅವರು ಶ್ರೀ ಪ್ರದೀಪ್ ಚಡ್ಡಾ ಅವರನ್ನು ಆಹ್ವಾನಿಸಿದ್ದರು. ಶ್ರೀ ಚಡ್ಡಾರವರು 'ವೇಸ್ಟ್ ಸೆಗ್ರಿಗೇಶನ್ ಆ್ಯಂಡ್ ಮ್ಯಾನೇಜ್‌ಮೆಂಟ್' ವಿಷಯದ ಮೇಲೆ ಎಕ್ಸ್‌ಪರ್ಟ್ ಇರುವಂತವು ಒಂದು ಸಣ್ಣ ಮಣ್ಣಿನ ಮೋಡೆಲ್ ತಂದು ಅದರಿಂದ ಹೇಗೆ ಗೊಬ್ಬರವನ್ನು ಮಾಡಬೇಕು ಅಂತ ವಿಸ್ತಾರವಾಗಿ ತಿಳಿಸಿದರು.

ಗೊಬ್ಬರವನ್ನು ಚಿಕ್ಕ ಸಂಸಾರ, ದೊಡ್ಡ ಸಂಸಾರ, ಹೌಸಿಂಗ್ ಸೊಸೈಟಿ, ಸ್ಕೂಲ್, ಕಾಲೇಜು ಕ್ಯಾಂಪಸ್‌ಗಳಲ್ಲಿ, ಹೋಟೆಲ್‌ಗಳಲ್ಲಿ ಈ ತರದ ಎಲ್ಲ ಸ್ಥಾನಗಳು ಅದರ ಗಾತ್ರಕ್ಕೆ ಅನುಸಾರವಾಗಿ ವ್ಯವಸ್ಥೆ ಮಾಡುಬಹುದಾಗಿ ಹೇಳಿದರು. ಈ ರೀತಿಯ 'ವೇಸ್ಟ್ ಸೆಗ್ರಿಗೇಶನ್ ಆ್ಯಂಡ್ ಮ್ಯಾನೇಜ್‌ಮೆಂಟ್' ಮಾಡುವುದರಿಂದ ಮನೆಯಲ್ಲಿಯ ಕಸದಿಂದ ರಸ ಮಾಡಬಹುದಾಗಿ ತಿಳಿದು ತುಂಬಾ ಖುಷಿಯಾಯಿತು.

ಶ್ರೀ ಚಡ್ಡಾರವರು ಸಂಘಕ್ಕೆ ಬಂತು ನಮಗೆಲ್ಲ ಈ ಉಪಯುಕ್ತ ಮಾಹಿತಿ ತಿಳಿಸಿದ್ದಕ್ಕಾಗಿ ರಾಜೇಶ್ವರಿ ಕಲ್ಲೂರ ಮತ್ತು ಸರೋಜ ಅವರು ಇಂಡೋರ್ ಏರ್ ಪ್ಯೂರಿಫಯಿಂಗ್ ಪ್ಲಾಂಟ್ ಕೊಟ್ಟು ಗೌರವ ವ್ಯಕ್ತಪಡಿಸಿದರು.

*ರಾಜೇಶ್ವರಿ ಕಲ್ಲೂರ*

# ಕೆಂಪುಕೋಟೆಯಲ್ಲಿ ನಡೆದ ಸ್ವಾತಂತ್ರ್ಯ ಸಂಭ್ರಮಾಚರಣೆಯಲ್ಲಿ ಕನ್ನಡಿಗರು




ಸ್ವಾತಂತ್ರ್ಯೋತ್ಸವದ ಆಚರಣೆಯಲ್ಲಿ ಕರ್ನಾಟಕದ ಸಾಂಪ್ರದಾಯಿಕ ಉಡುಗೆಗಳೊಂದಿಗೆ ದೆಹಲಿ ಕನ್ನಡ ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕವೃಂದ, ಸ್ಥಳಿಯ ಹಾಗೂ ಗುರುಗಾಂವ್ ಕನ್ನಡಿಗರು ಸಕ್ರಿಯವಾಗಿ ಭಾಗವಹಿಸಿದ್ದರು.

ದಿನಾಂಕ 15-08-2019ರಂದು ನವದೆಹಲಿಯ ಕೆಂಪುಕೋಟೆಯಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ನೆರವೇರಿಸಿದ ಧ್ವಜಾರೋಹಣದ ಸಂಭ್ರಮಕ್ಕೆ ಸಾಕ್ಷಿಯಾದರು.

ಬೇರೆ ಬೇರೆ ರಾಜ್ಯಗಳ ಸಾಂಪ್ರದಾಯಿಕ ಉಡುಗೆಯ ನಡುವೆ, ಕನ್ನಡಿಗರು ಸಾಂಪ್ರದಾಯಿಕ ಪಂಚೆ, ಶಲ್ಯ, ಮಗ್ಗದ ಸೀರೆ, ಮೈಸೂರು ಪೇಟಾ ಹಾಗೂ ಲಂಗ-ದಾವಣಿ ಮತ್ತಿತರ ಉಡುಗೆಯೊಂದಿಗೆ ರಾಜ್ಯವನ್ನು ಪ್ರತಿನಿಧಿಸಿದರು.

ಕರ್ನಾಟಕ ಸರಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ದೆಹಲಿ ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಶ್ರೀ ನಿಲಯ್ ಮಿತಾಶ್ ಅವರ ಮಾರ್ಗದರ್ಶನದಲ್ಲಿ, ಕರ್ನಾಟಕ ಭವನದ ಉಪನಿವಾಸಿ ಆಯುಕ್ತರಾದ ಶ್ರೀಮತಿ ಮೋನಿಕಾ ಕಷ್ಕರಿ, ಕರ್ನಾಟಕ ಭವನದ ವ್ಯವಸ್ಥಾಪಕರಾದ ಎಸ್. ಕೆ. ಆನಂದರಾಮ್, ಆರ್. ರೇಣುಕುಮಾರ ಹಾಗೂ ಭವನದ ಅಧಿಕಾರಿ ವರ್ಗ, ಸಿಬ್ಬಂದಿಯವರು ಕಾರ್ಯಕ್ರಮದ ಯಶಸ್ಸಿಗೆ ಕಾರಣೀಭೂತರಾದರು.

ಕರ್ನಾಟಕ ಭವನದ ಬಿ. ನಾರಾಯಣ, ಎಸ್. ಕುಮಾರ್, ಕರ್ನಾಟಕ ವಾರ್ತಾ ಕೇಂದ್ರದ ಅಮರೇಶ್ ಅವರು ಸಮನ್ವಯ ಕಾರ್ಯ ನಿರ್ವಹಿಸಿದರು. ಕರ್ನಾಟಕ ಸರಕಾರವು ಭಾಗವಹಿಸಿದ ಎಲ್ಲಾ ಕನ್ನಡಿಗರಿಗೆ ಅಚ್ಚುಕಟ್ಟಾದ ವ್ಯವಸ್ಥೆಯನ್ನು ಈ ಸಂದರ್ಭ ಆಯೋಜಿಸಿದ್ದರು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಕಟಣಾ ಸಹಾಯಕರು ಡಾ. ಷಣ್ಮುಖಾನಂದ, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಪ್ಪ ಎಂ., ದೆಹಲಿ ಕನ್ನಡ ಶಾಲೆಯ ಶಿಕ್ಷಕರಾದ ಅರವಿಂದ ಬಿಜ್ಜೈ, ಎಚ್. ಎಸ್. ತೇಲಿ, ರೇಖಾ ಐ. ಹಾಗೂ ಹಲವಾರು ಕನ್ನಡಿಗರು ಭಾಗವಹಿಸಿದ್ದರು.

***ಅರವಿಂದ ಬಿಜ್ಜೈ,***

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ಸೆಪ್ಟೆಂಬರ್, 2019ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ಸೆಪ್ಟೆಂಬರ್, 2019ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 29 ಸೆಪ್ಟೆಂಬರ್, 2019ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್ M.D. (AYU)** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 29 ಸೆಪ್ಟೆಂಬರ್, 2019ರಂದು ಸಾಯಂಕಾಲ 4 ಗಂಟೆಯಿಂದ.

**(ವಿಶೇಷ ಸೂಚನೆ : ವೈದ್ಯರನ್ನು ಸಂಪರ್ಕಿಸುವ ಮೊದಲು ಸಂಘಕ್ಕೆ ದೂರವಾಣಿ ಮುಖಾಂತರ ವೈದ್ಯರ ಉಪಸ್ಥಿತಿಯನ್ನು ಖಚಿತಪಡಿಸಿಕೊಳ್ಳಬೇಕಾಗಿ ವಿನಂತಿ.)**

# ಅಭಿನಂದನೆ



ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ : 18.08.2019ರಂದು ವೀಣಾವಾದನ ಕಾರ್ಯಕ್ರಮ ನೀಡಿದ ಕಲಾವಿದೆ ಕು. ದಿಶಾ ಪಿ. ರಾವ್ ಅವರನ್ನು ಅಭಿನಂದಿಸಲಾಯಿತು.




ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ : 18.08.2019ರಂದು ಯೋಗಾ ಪ್ರದರ್ಶನ ನೀಡಿದ ಯೋಗಪಟು ಬಾಲಕ ಪ್ರಿಯದರ್ಶನ್ ಅವರನ್ನು ಅಭಿನಂದಿಸಲಾಯಿತು.



ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ.

ದೂರವಾಣಿ : 011–26109615 / 26104818

---

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ಹೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ಧವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-



ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ : 18.08.2019ರಂದು ಹರಿಕಥೆ ನೀಡಿದ ಕಲಾವಿದೆ ರುಕ್ಮಿಣಿ ಹಂಡೆ ಅವರನ್ನು ಅಭಿನಂದಿಸಲಾಯಿತು.


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**

**PRINTING PRESS**

A HOUSE OF QUALITY PRINTING

Office :

C-95, Okhla Industrial Area

Phase-I, New Delhi – 110 020

Delhi Karnataka Sangha Abhimata
Sept-2019, Vol. No.29, Issue No.12, Price Rs.1/-
RNI Regn. No. 53405/91, DL-SW-1/4016/19-21
Date of Publication : Sept 8th / 9th, Posting Date :10th / 11th, Total Pages-24, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

